ಕರ್ನಾಟಕ ವಿಧಾನ ಸಭೆ

ಶುಕ್ರವಾರ 01ನೇ ಸೆಪ್ಟೆಂಬರ್ 1995ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.40 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆ

+ ಶ್ರೀ ಎಚ್.ಡಿ.ದೇವೇಗೌಡ (ಮುಖ್ಯಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ, ಕಳೆದ ದಿನಾಂಕ 31ನೇ ಆಗಸ್ಟ್ 1995ರ ಗುರುವಾರದಂದು ಸಂಜೆ ಚಂಡೀಗರ್‌ನಲ್ಲಿ ಸಂಭವಿಸಿದ ಕಾರ್ ಬಾಂಬ್ ಸ್ಫೋಟದಲ್ಲಿ ಹತ್ಯೆಗೆ ಒಳಗಾದ ಪಂಜಾಬಿನ ಮುಖ್ಯ ಮಂತ್ರಿ ಶ್ರೀ ಬೇ ಅಂತ್ ಸಿಂಗ್‌ರವರ ಸಾವಿನ ಬಗ್ಗೆ ಈ ಸಭೆ ತನ್ನ ಅತೀವ ದುಃಖವನ್ನು ವ್ಯಕ್ತಪಡಿಸುತ್ತದೆ. ಅತ್ಯಂತ ಅಮಾನುಷ ಹಾಗೂ ಹೇಯವಾದ ಈ ಕೃತ್ಯವನ್ನು ಖಂಡಿಸುತ್ತದೆ. ಭಯೋತ್ಪಾದಕರ ಹಿಡಿತಕ್ಕೆ ಸಿಕ್ಕಿ ಹೋಗಿದ್ದ ಪಂಜಾಬಿನಲ್ಲಿ ಶಾಂತಿ ಹಾಗೂ ನಿರಾತಂಕ ಜನಜೀವನ ವ್ಯವಸ್ಥೆಯ ಮರು ಸ್ಥಾಪನೆಗಾಗಿ ತಮ್ಮ ಪ್ರಾಣವನ್ನೇ ಒತ್ತೆ ಇಟ್ಟು ಶ್ರಮಿಸಿದಂತಹ ಶ್ರೀ ಬೇ ಅಂತ್ ಸಿಂಗ್‌ರವರು ಈ ಕಾರ್ಯದಲ್ಲಿ ಯಶಸ್ವಿಯಾಗಿದ್ದರು. ಈ ಸ್ಮರಣೆಯ ಸೇವೆಯಲ್ಲಿ ತಮ್ಮನ್ನು ತಾವೇ ಅರ್ಪಿಸಿಕೊಂಡಿದ್ದರು, ಅರ್ಪಣೆ ಮಾಡಿದರು. ಶ್ರೀ ಬೇ ಅಂತ್ ಸಿಂಗ್‌ರವರು 19ನೇ ಫೆಬ್ರವರಿ 1922ರಲ್ಲಿ ಲೂಧಿಯಾನ ಜಿಲ್ಲೆಯ ಬಿಲಾಸ್‌ಪುರದಲ್ಲಿ ಜನಿಸಿ, ಲಾಹೋರ್‌ನ ಪ್ರತಿಷ್ಠಿತ ಸರ್ಕಾರಿ ಕಾಲೇಜಿನಲ್ಲಿ ಪದವಿ ಶಿಕ್ಷಣವನ್ನು ಪಡೆದರು. ತಮ್ಮ 23ನೇ ವಯಸ್ಸಿನಲ್ಲಿಯೇ ಸೇನೆಯನ್ನು ಸೇರಿದರು. ಸಮಾಜ ಸೇವಾ ದುರೀಣರಾಗಿದ್ದರು. ರಾಷ್ಟ್ರೀಯ ವಿಭಜನೆಯ ನಂತರ ಸಕ್ರೀಯ ರಾಜಕಾರಣಿಯಾಗಿ ಇಳಿದರು. 1960ರಲ್ಲಿ ಲೂಧಿಯಾನ ಜಿಲ್ಲೆಯ ಲೋಹ ಹಾಕ್ ಬ್ಲಾಕ್ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. 1963ರಲ್ಲಿ ಸ್ವಲ್ಪ ಕಾಲ ಲೂಧಿಯಾನದ ಕೇಂದ್ರ ಸಹಕಾರಿ ಬ್ಯಾಂಕಿನಲ್ಲಿ ಸೇವೆಯನ್ನು ಅವರು ಸಲ್ಲಿಸಿದ್ದರು. 1969ರಲ್ಲಿ ಕಾಂಗ್ರೆಸ್ಸಿನ ಬೆಂಬಲಿತ ಪಕ್ಷೇತರ ಅಭ್ಯರ್ಥಿಯಾಗಿ ವಿಧಾನ ಸಭೆಯನ್ನು ಪ್ರವೇಶಿಸಿದ್ದರು. 1980ರಲ್ಲಿ ದರ್‌ಬಾರ್ ಸಿಂಗ್ ಸಚಿವ ಸಂಪುಟದಲ್ಲಿ ಸಚಿವರಾಗಿದ್ದರು. ಕಂದಾಯ, ಲೋಕೋಪಯೋಗಿ ಹಾಗೂ ತಾಂತ್ರಿಕ ಶಿಕ್ಷಣ ಖಾತೆಗಳನ್ನು ಅವರು ವಹಿಸಿಕೊಂಡಿದ್ದರು. ಫೆಬ್ರವರಿ 1992ರಲ್ಲಿ ಪಂಜಾಬ್‌ನ 13ನೇ ಮುಖ್ಯ ಮಂತ್ರಿಗಳಾಗಿ ಆಯ್ಕೆಯಾಗಿದ್ದರು. ಭಯೋತ್ಪಾದಕರ ಹಾಗೂ ಸಮಾಜ ಘಾತುಕ ಶಕ್ತಿಗಳ ಮೂಲೋಚ್ಚಾಟನೆ ಪೂರ್ಣವಾಗಿ ಆಗಿಲ್ಲವೆಂಬುದನ್ನು ಈ ದುರಾದೃಷ್ಟ ಘಟನೆಯು ಸೂಚಿಸುತ್ತದೆ. ರಾಷ್ಟ್ರ ವಿರೋಧಿ ಶಕ್ತಿಗಳ ವಿರುದ್ಧ ನಿರ್ಧಾಕ್ಷಿಣ್ಯ ಹೋರಾಟ ಮುಂದುವರೆಯುವುದು, ಪ್ರಜಾಸತ್ತಾತ್ಮಕ ಮೌಲ್ಯಗಳ ಬೆಳಕು ಹಾಗೂ ಮಾರ್ಗದರ್ಶನದಲ್ಲಿ ರಾಷ್ಟ್ರದ ಜೀವನ ನಡೆದು ಜನತೆಯ ಬಹು ಕಾಲದ ಆಶೋತ್ತರಗಳು ಶೀಘ್ರವಾಗಿ ಕೈಗೂಡಲು ಎಲ್ಲರ ನಿರಂತರ ಪ್ರಯತ್ನ ಹಾಗೂ ಸಹಕಾರ ಅಗತ್ಯವಾಗಿದೆ. ಈ ದಿಸೆಯಲ್ಲಿ ಶ್ರೀ ಬೇ ಅಂತ್ ಸಿಂಗ್‌ರವರ ಈ ಪ್ರಾಣಾರ್ಪಣೆ ಪ್ರಜಾತಂತ್ರದ ಉಳಿವಿಗಾಗಿ ಮಾಡಿದ ಬಹು ದೊಡ್ಡ ತ್ಯಾಗವೆಂದು ಈ ಸಭೆ ಅಭಿಪ್ರಾಯ ಪಟ್ಟಿದೆ. ದಿವಂಗತರ ಕುಟುಂಬದವರಿಗೆ ಸಭೆಯು ತನ್ನ ಅನುಕಂಪವನ್ನು ವ್ಯಕ್ತಪಡಿಸುತ್ತದೆ.

+ಶ್ರೀ ಜಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಪಂಜಾಬಿನ ಮುಖ್ಯ ಮಂತ್ರಿಗಳು ಬೇ ಅಂತ್ ಸಿಂಗ್‌ರವರು ನಿನ್ನೆ ದಿವಸ ನಿಧನ ಹೊಂದಿದ್ದಾರೆ. ಆ ಭಯೋತ್ಪಾದಕರ ಒಂದು ಪರಿಸ್ಥಿತಿಯಿಂದ ಈ ಸ್ಥಿತಿ ಬಂದಿದೆ. ಇಡೀ ದೇಶದ ಎಲ್ಲಾ ಜನ

ದಿಗ್ಭ್ರಾಂತಗೊಡಿಂದ್ದಾರೆ. ಪಂಜಾಬು ನಮ್ಮ ಕೈ ಬಿಟ್ಟು ಹೋಗುತ್ತಿದೆ. ಶಾಂತಿ ಸುವ್ಯವಸ್ಥೆ ಕಾಪಾಡುವುದಕ್ಕೆ ಆಗುವುದಿಲ್ಲ ಎನ್ನುವ ಕಾಲದಲ್ಲಿ ಮುಖ್ಯ ಮಂತ್ರಿಗಳಾಗಿ ಅಧಿಕಾರ ಸ್ವೀಕಾರ ಮಾಡಿದ ತಕ್ಷಣ ಭಯೋತ್ಪಾದಕರನ್ನು ಸದೆಬಡಿದು ಪಂಜಾಬಿನಲ್ಲಿ ಶಾಂತಿ ಸುವ್ಯವಸ್ಥೆ ಪುನರ್ ಪ್ರತಿಷ್ಠಾಪನೆ ಮಾಡಿ ಒಬ್ಬ ಶಾಂತಿ ಧೂತನಂತೆ ಕೆಲಸ ಮಾಡಿದರು. ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಪುನರ್ ಸ್ಥಾಪನೆ ಮಾಡಿದಂತಹ ಮಹಾನ್ ವ್ಯಕ್ತಿ ಬಹುಶಃ ಮತ್ತೊಬ್ಬ ಸಿಗಲಾರ. ಅಂತಹ ಇಳಿ ವಯಸ್ಸಿನಲ್ಲಿಯೂ ಸಹ ಯಾವುದಕ್ಕೂ ಜಗ್ಗದೆ ಹೋರಾಟ ಮಾಡಿದಂತಹ ಮಹಾನ್ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಇಡೀ ದೇಶದ ಜನ ದುಃಖಿಃ ಪಡುತ್ತಾ ಇರತಕ್ಕಂತಹ ಈ ಸಂಧರ್ಭದಲ್ಲಿ ಸನ್ಮಾನ್ಯ ಸಭಾನಾಯಕರು ಏನು ಒಂದು ನಿರ್ಣಯ ತಂದಿದ್ದಾರೆ, ಅದಕ್ಕೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ.

+ಶ್ರೀ ಎಂ.ಮಲ್ಲಿಕಾರ್ಜುನಖರ್ಗೆ (ಗುರುಮಿಠ್‌ಕಲ್):- ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ನಡೆದಂತಹ ಒಂದು ದುರ್ಘಟನೆಯಲ್ಲಿ ಶ್ರೀಮಾನ್ ಬೇಅಂತ್ ಸಿಂಗ್‌ರವರು ಮರಣ ಹೊಂದಿದ್ದಾರೆ. ನಾವು ಬೇಅಂತ್ ಸಿಂಗ್‌ರವರನ್ನು ಕಳೆದುಕೊಂಡಿದ್ದೇವೆ. ಅವರು ನಮ್ಮ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು. ಬ್ಲಾಕ್ ಕಾಂಗ್ರೆಸ್ ಕಮಿಟಿಯಿಂದ ಹಿಡಿದು ವರ್ಕಿಂಗ್ ಕಮಿಟಿ ಮತ್ತು ಪಾರ್ಲಿಮೆಂಟರಿ ಸದಸ್ಯರ ಬೋರ್ಡಿನ ಸದಸ್ಯರಾಗಿ ಕೆಲಸವನ್ನು ನಿರ್ವಹಿಸುತ್ತಿದ್ದರು. ಅಂತಹ ಒಬ್ಬ ಪಕ್ಷದ ಕಾರ್ಯಕರ್ತರು ಅಲ್ಲದೆ, ಈ ದೇಶದಲ್ಲಿ ಶಾಂತಿಯನ್ನು ಸ್ಥಾಪನೆ ಮಾಡುವುದಕ್ಕೋಸ್ಕರ ಅವರು ಮಾಡಿದಂತಹ ತ್ಯಾಗ ಮತ್ತು ಬಲಿದಾನವನ್ನು ನಾವೆಲ್ಲರೂ ಕೂಡ ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಸುಮಾರು 73 ವರ್ಷ ಮುಗಿಸಿ 74 ನೇ ವರ್ಷಕ್ಕೆ ಕಾಲಿಟ್ಟಂತಹ ಬೇಅಂತ್ ಸಿಂಗ್‌ರವರು ಮಂತ್ರಿಗಳಾಗಿ, ಮುಖ್ಯ ಮಂತ್ರಿಗಳಾಗಿ ಪಂಜಾಭ್ ರಾಜ್ಯದಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ. ವಿಶೇಷವಾಗಿ ಯಾವಾಗ ಟೆರರಿಸ್ಟ್ಸ್ ಈ ದೇಶವನ್ನು ಚಿದ್ರಗೊಳಿಸಬೇಕು ಮತ್ತು ದೇಶವನ್ನು ಒಡೆಸಬೇಕು ಅನ್ನತಕ್ಕಂತಹ ಪ್ರಯತ್ನವನ್ನು ಏನು ಮಾಡುತ್ತಿದ್ದರು ಅಂತಹ ಸಂದರ್ಭದಲ್ಲಿ ಅವರು ಪಂಜಾಬಿನಲ್ಲಿ ಶಾಂತಿಯನ್ನು ಸ್ಥಾಪನೆ ಮಾಡುವುದಕ್ಕೋಸ್ಕರ ಸರ್ವ ಪ್ರಯತ್ನ ಮಾಡಿ, ಶಾಂತಿಯನ್ನು ಅಲ್ಲಿ ಸ್ಥಾಪನೆ ಮಾಡಿದರು. ಅನೇಕ ಸಲ ಅವರ ಮೇಲೆ ಇಂತಹ ಧಾಳಿಗಳು ನಡೆದವು. ಎರಡು ವರ್ಷಗಳ ಹಿಂದೆ ಅದೇ ಸೆಕ್ರೆಟೇರಿಯಟ್‌ನಲ್ಲಿ ಒಂದು ಬಾಂಬ್ ಸ್ಫೋಟ ಆಗಿತ್ತು, ಅವರ ಆಫೀಸ್ ಕೆಳಗಡೆ ಹಿಂದೆ ಕೂಡ ಬಾಂಬ್ ಇಟ್ಟಿದ್ದರು. ಆದರೆ ಅದರಲ್ಲಿ ಅವರು ಪಾರಾದರು. ಅವರಿಗೆ ಏನೂ ಅಪಾಯವಾಗಲಿಲ್ಲ. ಆದರೆ ನಿನ್ನೆ ಕಾರಿನಲ್ಲಿ ಒಂದು ಬಾಂಬನ್ನು ಇಟ್ಟು ಅವರನ್ನು ಕೊಲೆ ಮಾಡಿದರು. ಜೊತೆಯಲ್ಲಿ ಸುಮಾರು 15 ಜನ ಕೂಡ ಇವತ್ತು ಆ ಬಾಂಬ್ ಸ್ಫೋಟದಲ್ಲಿ ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ನಾವೆಲ್ಲರೂ ಕೂಡ ಅವರನ್ನು ನೆನಪಿಸಿಕೊಳ್ಳಬೇಕು. ಯಾರು ದೇಶದ ಐಕ್ಯತೆಗಾಗಿ, ಒಗ್ಗಟ್ಟಿಗಾಗಿ ಮತ್ತು ಶಾಂತಿಯನ್ನು ಸ್ಥಾಪನೆ ಮಾಡುವುದಕ್ಕೋಸ್ಕರ ತನ್ನ ಜೀವನವನ್ನೇ ಬಲಿದಾನ ಮಾಡಿದ್ದಾರೆ ಅಂತಹವರನ್ನು ನೆನಪಿಸಿಕೊಳ್ಳಬೇಕು ಇವತ್ತು ಅವರ ಕುಟುಂಬವು ಕೂಡ ಬಹಳ ಕಷ್ಟದಲ್ಲಿ ಇದೆ. ಅದಕ್ಕಾಗಿ ಅವರ ನೋವಿನಲ್ಲಿ ನಾವೆಲ್ಲರೂ ಕೂಡ ಪಾಲ್ಗೊಳ್ಳೋಣ. ಮತ್ತು ಮಾನ್ಯ ಮುಖ್ಯಮಂತ್ರಿಗಳು ತಂದಂತಹ ಈ ಸಂತಾಪ ಸೂಚನಾ ನಿರ್ಣಯಕ್ಕೆ ಒಮ್ಮತದಿಂದ ನಾವು ಕೂಡ ಒಪ್ಪಿಗೆ ಕೊಟ್ಟು ಅವರ ಕುಟುಂಬಕ್ಕೆ ಆದಂತಹ ನಷ್ಟವನ್ನು ಸಹಿಸತಕ್ಕಂತಹ ಶಕ್ತಿ ಕೊಡಲಿ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಸ್.ಬಂಗಾರಪ್ಪ (ಸೊರಬ):- ಮಾನ್ಯ ಸಭಾಧ್ಯಕ್ಷರೆ, ಸಭಾ ನಾಯಕರು ತಂದಂತಹ ಈ ನಿರ್ಣಯವನ್ನು ಬೆಂಬಲಿಸಿ ನನ್ನ ಎರಡು ಮಾತು. ಭಯೋತ್ಪಾದನೆ ಮೂಲೋಚ್ಛಾಟನೆ ಆಗಬೇಕು ಎನ್ನತಕ್ಕಂತಹ ಅನಿಸಿಕೆಯ ಕ್ಷಣಗಳನ್ನು ಹಲವಾರು ವರ್ಷಗಳಿಂದ ಜನ ಈ ದೇಶದಲ್ಲಿ ಕಳೆದಿದ್ದಾರೆ. ಅದು ಪ್ರಪಂಚದ ಅನೇಕ ರಾಷ್ಟ್ರಗಳಲ್ಲೂ ಕೂಡ ನಡೆದಿದೆ, ನಡೆಯುತ್ತಿದೆ. ಪಂಜಾಬಿನಲ್ಲಿ ಅಲ್ಲದೆ ರಾಷ್ಟ್ರದ ಅನೇಕ ಭಾಗಗಳಲ್ಲೂ ಕೂಡ ಈ ಭಯೋತ್ಪಾದನಾ ಚಟುವಟಿಕೆಗಳು ಅವ್ಯಾಹತವಾಗಿ ನಡೆದಿರತಕ್ಕಂಥಾದ್ದನ್ನು ನಾವೆಲ್ಲ ಕಂಡಿದ್ದೇವೆ. ಪಂಜಾಬಿಗೆ ಹಲವಾರು ವರ್ಷಗಳಿಂದ ಹಿಡಿದಂತಹ ಆ ಒಂದು ಕಾರ್ಮೋಡವನ್ನು ದೂರ ಸರಿಸತಕ್ಕಂತಹ ಜವಾಬ್ದಾರಿಯನ್ನು ಬೇಅಂತ್ ಸಿಂಗ್‌ರವರು ಹೊತ್ತರು. ಅವರ ಆಡಳಿತ ಕಾಲದಲ್ಲಿ ಜನ ಪಂಜಾಬಿನಲ್ಲಿ ಮತ್ತು ದೇಶದಲ್ಲಿ ನಿಟ್ಟುಸಿರು ಬಿಟ್ಟರು. ಶಾಂತಿನೆಲೆಸಿದೆ, ಭಯೋತ್ಪಾದನಾ ಚಟುವಟಿಕೆಗಳು ನಿಂತಿವೆ ಅಥವಾ ಸ್ಥಗಿತಗೊಂಡಿವೆ ಎನ್ನುವಂತಹ ಅನಿಸಿಕೆ ಜನಸಾಮಾನ್ಯರಲ್ಲಿಯೂ ಕೂಡ ಬರುವುದಕ್ಕೆ ಪ್ರಾರಂಭವಾಯಿತು. ಅದರ ಅರ್ಥ ಇಷ್ಟೆ. ಒಬ್ಬ ವ್ಯಕ್ತಿ ಜವಾಬ್ದಾರಿಯನ್ನು ಹೊತ್ತು ಅಧಿಕಾರ ಅಥವಾ ಜನರ ಸಹಾಯ ಸಹಕಾರದಿಂದ ಶಾಂತಿ ನೆಲೆಸಬೇಕು. ಪೂಜ್ಯ ಮಹಾತ್ಮಗಾಂಧೀಜಿಯವರು, ಪಂಡಿತ್ ಜವಾಹರಲಾಲ್ ನೆಹರೂರವರು, ಅಬುಲ್ ಕಲಾಮ್ ಆಜಾದ್‌ರವರಂಥ ಮಹಾನ್ ಮಹಾನ್ ವ್ಯಕ್ತಿಗಳು, ಲಕ್ಷಾಂತರ ಜನರ ಜೊತೆಯಲ್ಲಿ ಶಾಂತಿ ಹೆಸರಿನಲ್ಲಿ ನಾವು ಸ್ವತಂತ್ರ ಗಳಿಸಿ ಆದ ಮೇಲೆ ಈ ಭಯೋತ್ಪಾದನಾ ಚಟುವಟಿಕೆಗಳು ಆದಕ್ಕೆ ತದ್ವಿರುದ್ಧವಾಗಿರತಕ್ಕ ಅಂಶಗಳು. ಅದು ಅಲ್ಲಿ ಇರಬಾರದು. ಅದು ನಮ್ಮ ರಾಷ್ಟ್ರೀಯ ನೀತಿಗೆ ಒಂದು ಮಾರಕ. ಈ ಒಂದು ನೀತಿಯನ್ನು ಅನುಸರಿಸಿ ಬೇಅಂತ್ ಸಿಂಗ್‌ರು ಸ್ಪಷ್ಟವಾಗಿ ಶಾಂತಿ ನೆಲೆಸುವುದಕ್ಕೆ ಕಾರಣರಾದರು. ಇತ್ತೀಚಿನ ದಿನಗಳಲ್ಲಿ ಪಂಜಾಬಿನ ಬಗ್ಗೆ ಜನ ಅಷ್ಟೊಂದು ಮಾತನಾಡುತ್ತಾ ಇರಲಿಲ್ಲ. ನಾವು ಅದಕ್ಕಾಗಿ ಬೇಅಂತ್ ಸಿಂಗರ ನಾಯಕತ್ವದಲ್ಲಿ ಯಾವಾಗಲೂ ಶಾಂತಿ ನೆಲೆಸಿದೆ. ಎನ್ನತಕ್ಕಂತಹ ಅನಿಸಿಕೆಯನ್ನು ಎಲ್ಲಾ ರಾಜಕೀಯ ಪಕ್ಷದ ಜನ ಒಂದು ಸಮಾಧಾನ ತಂದುಕೊಂಡಿರತಕ್ಕಂತಹ ಕಾಲದಲ್ಲಿ ಅವರು ಪುನಃ ಭಯೋತ್ಪಾದನಾ ಚಟುವಟಿಕೆಗೆ ಬಲಿ ಆಗಿರತಕ್ಕಂಥದ್ದು ಇದು ಒಂದು ಬಹಳ ವಿಪರ್ಯಾಸ ಎನ್ನತಕ್ಕಂತಹ ಮಾತು ಹೇಳುವುದಕ್ಕಿಂತ ಇದು ಒಂದು ವಿಧಿ ಕೈವಾಡ ಏನು ನಡೆದಿದೆ ಇದು ಮತ್ತೆ ರಾಷ್ಟ್ರೀಯ ಈ ಒಂದು ಶಾಂತಿ ನೀತಿಯನ್ನು ನಂಬಿಕೊಂಡಿರತಕ್ಕಂತಹ ಜನರಿಗೆ ಆತಂಕವನ್ನು ಉಂಟು ಮಾಡತಕ್ಕಂತಹ ಕ್ಷಣ ಅಥವಾ ಘಳಿಗೆಯನ್ನು ಅದು ಮತ್ತೊಮ್ಮೆ ಉತ್ಪನ್ನ ಮಾಡಿದೆ. ಆದರೆ ಅವರ ಹೋರಾಟ ನಿಜಕ್ಕೂ ಬಹಳ ಅಪರೂಪವಾಗಿರತಕ್ಕಂತಹ ಹೋರಾಟ. ಶಾಂತಿ ನೆಲೆಸಿರತಕ್ಕಂತಹ ಸಮಾಧಾನ ಅವರಿಗೆ ಇತ್ತು. ಅದಕ್ಕಾಗಿ ಅವರು ಮುಂದುವರೆಯಬೇಕೆಂಬ ಆಸೆ ಆಕಾಂಕ್ಷೆ ಶಾಂತಿಯನ್ನು ಬಯಕೆ ಮಾಡತಕ್ಕಂತಹ ವರ್ಗಗಳಲ್ಲಿ ಮೂಲತಃ ಆಳವಾಗಿ ನೆಲೆ ಊರಿತು. ಅದಕ್ಕಾಗಿ ಇವತ್ತು ಅಂತಹ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ನಾವು ಕಳೆದುಕೊಂಡರೆ, ಆ ನಷ್ಟ ಬರೀ ಅವರ ಕುಟುಂಬ ವರ್ಗಕ್ಕೆ ಅಷ್ಟೇ ಅಲ್ಲ ಬರೀ ಪಂಜಾಬ್ ರಾಜ್ಯಕ್ಕೆ ಅಷ್ಟೇ ಅಲ್ಲ, ಅದು ಇಡೀ ರಾಷ್ಟ್ರಕ್ಕೆ ನಷ್ಟ ಎಂಬ ದೃಷ್ಟಿಯಿಂದ ನಾವು ಕಾಣಬೇಕಾಗುತ್ತದೆ. ಅದಕ್ಕಾಗಿ ನಾನು ಈ ಮೂರು ಮಾತುಗಳನ್ನು ಮೊದಲು ಕೆಲವು ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಆ ಮಾತನ್ನು ಆಡಬೇಕಾಗುತ್ತದೆ. ಅದಕ್ಕಾಗಿ ನಾನು ಇವತ್ತು ಅವರು ತೀರಿಕೊಂಡು ಹೋಗಿದ್ದಾರೆ, ಅವರ ಜೊತೆ 12-15 ಜನ ಇರಬಹುದು ಏಕೆಂದರೆ ಗಾಯ ಆಗಿರತಕ್ಕಂಥವರು ಇತ್ಯಾದಿಗಳು. ಸುಮಾರು ಒಟ್ಟು 15 ಜನ ತೀರಿಕೊಂಡು ಹೋಗಿ ಅದರ ವಿವರಗಳನ್ನು ಪತ್ರಿಕೆಯನ್ನು ಓದಿದರೆ ಆಘಾತವಾಗುತ್ತದೆ. ಸೆಕ್ಯುರಿಟಿ ಅಷ್ಟು ಇದ್ದರೂ ಕೂಡ ಹೇಗೆ ನಡೆಯುತ್ತದೊ ನಮಗಂತೂ ಗೊತ್ತಾಗುವುದಿಲ್ಲ. ಆರ್.ಡಿ.ಎಕ್ಸ್ ಉಪಯೋಗ ಮಾಡಿದ್ದಾರೆ ಮತ್ತು

ರಿಮೋಟ್ ಕಂಟ್ರೋಲ್ ಉಪಯೋಗ ಮಾಡಿದ್ದಾರೆ. ಇತ್ಯಾದಿ ಮಾತುಗಳು ತನಿಖೆಗೆ ಒಳಪಡತಕ್ಕಂತಹ ವಿಚಾರ ಆದರೂ ಕೂಡ ಆತಂಕವನ್ನು ಉಂಟು ಮಾಡತಕ್ಕಂತಹ ವಿಷಯಗಳು ಪುನಃ ಪುನರಾವರ್ತನೆ ಆ ರಾಜ್ಯದಲ್ಲಿ ಮಾಡಿವೆ ಎನ್ನತಕ್ಕಂತಹ ಮಾತು ಇಡೀ ರಾಷ್ಟ್ರಕ್ಕೆ ಆತಂಕವನ್ನು ಉಂಟು ಮಾಡಿರತಕ್ಕಂತಹ ವಿಷಯ. ಈ ಸಂದರ್ಭದಲ್ಲಿ ಪಂಜಾಮ್ ಜನತೆಗೆ ಕರ್ನಾಟಕ ರಾಜ್ಯದ ವತಿಯಿಂದ ನಾವು ಒಂದು ಮಾತನ್ನು ಹೇಳಬಹುದು. ಶಾಂತಿಯ ನಿಮ್ಮ ವಿಚಾರಧಾರೆಯನ್ನು ಬೇಅಂತ್ ಸಿಂಗ್ ಮತ್ತು ಇತ್ಯಾದಿಯವರು ಏನು ಮುಂದುವರೆಸಿಕೊಂಡು ಬಂದರು ಅದನ್ನು ಉಳಿದಿರತಕ್ಕಂಥವರು ದೇಶದ ಹಿತದೃಷ್ಟಿಯಿಂದ ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ. ಅದಕ್ಕೆ ನಮ್ಮೆಲ್ಲರ ಸಹಕಾರ, ಸಹಾನುಭೂತಿ, ಬೆಂಬಲ ಸಂಪೂರ್ಣವಾಗಿ ಇದೆ ಎನ್ನುವ ಅಂಶವನ್ನು ನಾವು ಈ ಸಂದರ್ಭದಲ್ಲಿ ಹೇಳೋಣ. ಇವತ್ತು ತೀರಿಕೊಂಡು ಹೋಗಿರತಕ್ಕಂಥ ಬೇಅಂತ್‌ಸಿಂಗ್ ಅವರು ದೇಹವನ್ನು ಗುರುತಿಸುವುದಕ್ಕೂ ಕೂಡ ಸಾಧ್ಯವಾಗದೇ ಇರುವಂತಹ ಪರಿಸ್ಥಿತಿ ಇದೆ. ಇನ್ನು ಅನೇಕ ಜನ ಅಂಗರಕ್ಷಕರು ಕಮಾಂಡರ್ಸ್ ಬ್ಲಾಕ್ ಕ್ಯಾಟ್ಸ್ ಇತ್ಯಾದಿ ಯಾರ್ಯಾರು ಹೋಗಿದ್ದಾರೆ ಅವರ ಆತ್ಮಕ್ಕೂ ಕೂಡ ನಾವು ಬೇಅಂತ್ ಸಿಂಗ್ರವರ ಆತ್ಮಕ್ಕೆ ಶಾಂತಿಯನ್ನು ಬಯಸಿದೆ ಹಾಗೆ ಇವತ್ತು ನಾವು ಬಯಸೋಣ ಅವರ ಕುಟುಂಬ ವರ್ಗದವರಿಗೂ ಸಹ ಅವರ ನಿಧನದಿಂದ ಆದ ದುಃಖವನ್ನು ತಡೆದುಕೊಳ್ಳತಕ್ಕಂಥ ಶಕ್ತಿ ಬರಲಿ ಎಂದು ಹೇಳುತ್ತಿದ್ದೇನೆ. ಪಂಜಾಬಿನ ಜನತೆ ಅವರು ನೀತಿಯನ್ನು ಮುಂದುವರೆಸಿಕೊಂಡು ಹೋಗಬೇಕು ಇದು ಆ ಪಕ್ಷ, ಈ ಪಕ್ಷ ಎನ್ನುವ ಪ್ರಶ್ನೆಯಲ್ಲ ಇದು ರಾಷ್ಟ್ರದ ಹಿತದ ಪ್ರಶ್ನೆ. ಪಂಜಾಬಿನಲ್ಲಿ ಪುನಃ ಶಾಂತಿ ಆವರಿಸಕೊಳ್ಳತಕ್ಕಂಥ ವಿಚಾರ ಇದರಲ್ಲಿ ಅಡಗಿದೆ ಎಂದು ಈ ಸಂದರ್ಭದಲ್ಲಿ ಹೇಳಿ ಈ ನಿರ್ಣಯಕ್ಕೆ ಬೆಂಬಲ ಸೂಚಿಸಿ, ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಪಂಜಾಬಿನ ಮುಖ್ಯಮಂತ್ರಿಗಳ ನಿಧನದ ಬಗ್ಗೆ ತಂದಿರತಕ್ಕಂಥ ಈ ನಿರ್ಣಯವನ್ನು ಬೆಂಬಲಿಸುತ್ತೇನೆ. ಜೊತೆಗೆ ನಾವು ದೇಶದಲ್ಲಿ ರಕ್ಷಣೆಯೇ ಇಲ್ಲವೇನೋ ಎನ್ನುವ ರೀತಿಯಲ್ಲಿ ಭಯದ ವಾತಾವರಣ ಎಲ್ಲಾ ಆಗಿದೆ. ನಮ್ಮ ದೇಶದ ಇತಿಹಾಸವನ್ನು ನೋಡಿದಾಗ ಶ್ರೀಮತಿ ಇಂದಿರಾಗಾಂಧಿಯವರು ಅವರ ಅಂಗರಕ್ಷಕನಿಂದಲೇ ಹತ್ಯೆಗೀಡಾದರು. ಅದಾದನಂತರ ರಾಜೀವ್‌ಗಾಂದಿ ಅವರ ಹತ್ಯೆಯನ್ನು ಕೂಡ ನೋಡಿದ್ದಾಯಿತು. ಮತ್ತು ಈಗ ಪಂಜಾಬಿನ ಮುಖ್ಯಮಂತ್ರಿಯವರ ಹತ್ಯೆಯಾಗಿದೆ. ಇದೆಲ್ಲಾ ಸ್ವಲ್ಪ ಕಾಲು ಶತಮಾನದಲ್ಲಿ ನಡೆದಿದೆ. ಈ ರಕ್ಷಣೆ ವಿಫಲವಾಗಿರುವುದರ ಬಗ್ಗೆ ಒಂದು ಕಡೆ ನಾವು ಅವಲೋಕನ ಮಾಡಿಕೊಂಡು ಮೌನವಾಗಿ ಕುಳಿತುಕೊಳ್ಳತಕ್ಕಂಥ ಪರಿಸ್ಥಿತಿ ಇಲ್ಲ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರನ್ನು ಹತ್ಯೆ ಮಾಡಿದವರು ಯಾರು ಎಂದು ಇದುವರೆವಿಗೂ ಪತ್ತೆಯಾಗಿಲ್ಲ. ಹಾಗೆ ಶ್ರೀಮತಿ ಇಂದಿರಾಗಾಂಧಿಯವರ ಹತ್ಯೆ ಬಗ್ಗೆ ಸಹ ಇದುವರೆಗೂ ಪತ್ತೆಯಾಗಿಲ್ಲ. ಮತ್ತು ಇದೂ ಒಂದು ಬಹಳ ದೊಡ್ಡ ಆಘಾತವಾಗಿರತಕ್ಕಂಥ ಈ ಪರಿಸ್ಥಿತಿಯಲ್ಲಿ ದೇಶದಲ್ಲಿ ನಾವು ಏನು ಮಾಡಬೇಕು ಹಾಗೂ ಯಾವ ದಿಕ್ಕಿಗೆ ನಾವು ಹೋಗುತ್ತಿದ್ದೇವೆ ಎನ್ನುವುದನ್ನು ಬಹಳ ಪ್ರಾಮುಖ್ಯವಾಗಿ ಚರ್ಚೆ ಮಾಡಬೇಕಾಗಿದೆ. ರಕ್ಷಣೆ ಈ ದೇಶದಲ್ಲಿ ಇದೆಯೆ ಇಲ್ಲವೆ ಎನ್ನುವಂತಹ ಒಂದು ಭೀತಿ ಭಯವನ್ನು ನಾವೇ ಹಾಕಿಕೊಳ್ಳಬೇಕಾದಂತಹ ಪರಿಸ್ಥಿತಿ ಉದ್ಭವವಾಗಿದೆ. ಇದಕ್ಕೆ ಕಾರಣ ಏನೆನ್ನುವುದನ್ನು ಈ ದೇಶದ ಎಲ್ಲಾ ಪಕ್ಷದ ಮುಖಂಡರು, ಚಿಂತಕರು ಚಿಂತನೆ ಮಾಡಬೇಕಾಗುತ್ತದೆ. ಮತ್ತು ಇದರ ಬಗ್ಗೆ ಕಾರ್ಯೋನ್ಮುಖವಾಗಬೇಕಾಗಿದೆ. ಭಯೋತ್ಪಾದನೆ ಕಡಿಯಬೇಕಾದರೆ ನಾವೆಲ್ಲರೂ ಒಮ್ಮತದಿಂದ

ಮುಂದೆ ನುಗ್ಗಬೇಕಾದಂತಹ ಕೆಲಸ ನಮ್ಮ ಅತ್ಯಂತ ಪ್ರಥಮ ಕರ್ತವ್ಯ. ಪಂಜಾಬಿನ ಅಭಿವೃದ್ಧಿಗೆ ಮತ್ತು ಶಾಂತಿಯನ್ನು ಕಾಪಾಡುವುದರಲ್ಲಿ ಬೇಅಂತ್ ಸಿಂಗ್‌ರವರು ಬಹಳ ಹೆಚ್ಚಿನ ರೀತಿಯಲ್ಲಿ ಕೆಲಸವನ್ನು ಮಾಡಿದರು ಹಾಗೂ ಅಲ್ಲಿ ಶಾಂತಿ ನೆಲೆಸಿರತಕ್ಕಂಥಾದ್ದು ದೇಶದ ಎಲ್ಲಾ ಕಡೆ ಒಂದು ರೀತಿಯ ನಿಟ್ಟುಸಿರು ಬಿಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಯಿತು. ಅವರನ್ನು ಮಹಾಗಟ್ಟ ವ್ಯಕ್ತಿ, ಕಬ್ಬಿಣದ ವ್ಯಕ್ತಿ ಎಂದು ಕರೆಯುತ್ತಿದ್ದರು. ಅಂತಹ ವ್ಯಕ್ತಿಯ ಪರಿಸ್ಥಿತಿ ಈ ರೀತಿ ಆಗಿರಬೇಕಾದರೆ ನಿಜವಾಗಿಯೂ ಈ ದೇಶದಲ್ಲಿ ಸಂಪೂರ್ಣವಾಗಿ ರಕ್ಷಣೆ ವಿಫಲವಾಗಿದೆ. ಇದಕ್ಕೆ ಎರಡನೇ ಅಭಿಪ್ರಾಯ ಇಲ್ಲ. ಇದಕ್ಕೆ ಜವಾಬ್ದಾರಿಯಾರು ಎನ್ನುವುದರ ಬಗ್ಗೆ ಈಗ ಅತಿ ಮುಖ್ಯವಾಗಿ, ಪ್ರಾಮಾಣಿಕವಾಗಿ ನಾವು ಚಿಂತನೆ ಮಾಡಬೇಕಾಗಿದೆ. ಈ ದೇಶದ ಉದ್ದಗಲಕ್ಕೂ ಈ ಚಿಂತನೆ ನಡೆಯಬೇಕಾಗಿದೆ, ಮತ್ತು ಕರ್ನಾಟಕದಲ್ಲೂ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ, ಈ ರಾಜ್ಯಕ್ಕೆ ದಿಕ್ಕೆಟ್ಟು, ಎಲ್ಲಾ ಕಡೆಯಿಂದ ಜನ ಬರುತ್ತಿದ್ದಾರೆ. ಅವರು ಯಾವ್ಯಾವ ಕಡೆಯಿಂದ ಬರುತ್ತಿದ್ದಾರೆ, ಯಾರ್ಯಾರು ಎಲ್ಲಿ ಸೇರುತ್ತಿದ್ದಾರೆ ಯಾರ್ಯಾರು ಎಲ್ಲಿದ್ದಾರೆ ಯಾವ ಗುಂಪಿನವರು ಬರುತ್ತಿದ್ದಾರೆ, ಕರ್ನಾಟಕದ ಯಾವ್ಯಾವ ಮೂಲೆಯಲ್ಲಿ ಅವರು ತಂಗುತ್ತಿದ್ದಾರೆ, ಅವರ ಚರ್ಯೆ ಏನು, ಅವರ ವಿಚಾರಗಳು ಏನು ಎನ್ನುವುದನ್ನು ಸಹ ನಾವು ಚಿಂತನೆ ಮಾಡಬೇಕಾಗಿದೆ. ಈ ಚಿಂತನೆ ಆಗಲಿಲ್ಲ ಎಂದರೆ ಕರ್ನಾಟಕ ರಾಜ್ಯದಲ್ಲೂ ಈ ರೀತಿಯ ಭಯೋತ್ಪಾದನೆ ಅಲ್ಲಲ್ಲಿ ನಡೆಯುತ್ತದೆ. ಇದನ್ನೆಲ್ಲಾ ನಾವು ನೋಡುತ್ತಿದ್ದೇವೆ. ಅದು ಕೆಲವು ಕಡೆ ಸ್ವಲ್ಪ ಹೊಗೆಯಾಡುತ್ತಿದೆ. ಆದುದರಿಂದ ಈ ಬಗ್ಗೆಯೂ ಸಹ ಮಾನ್ಯ ಮುಖ್ಯಮಂತ್ರಿಗಳು ಗಮನ ಹರಿಸಬೇಕು. ನಾನು ನಿನ್ನೆ ಮಂಡ್ಯಕ್ಕೆ ಹೋಗಿ ಬರುವಾಗ ಈ ಸುದ್ದಿ ಕೇಳಿದ ತಕ್ಷಣ ಒಂದು ರೀತಿಯ ಭೀತಿಯ ವಾತಾವರಣವೇ ನಿರ್ಮಾಣವಾಯಿತು. ಈ ಪರಿಸ್ಥಿತಿ ನಿರ್ಮಾಣವಾಯಿತಲ್ಲ, ಮುಂದೆ ಪರಿಸ್ಥಿತಿ ಏನು ಎಂದು? ಆದುದರಿಂದ ಇದನ್ನು ಎಲ್ಲರೂ ಸೇರಿ ಖಂಡನೆ ಮಾಡಬೇಕು. ಮತ್ತು ಮುಂದೆ ಈ ರೀತಿಯಾಗದೇ ಇರುವುದಕ್ಕೆ ಈ ದೇಶದಲ್ಲಿ ಯಾವ ರೀತಿ ಹೋಗಬೇಕೆಂದು ಚಿಂತನೆ ಮಾಡಬೇಕಾದ್ದು ಸಹ ಕರ್ತವ್ಯ ಎಂದು ಹೇಳುತ್ತೇನೆ. ಹಾಗೂ ಅವರ ನಿಧನಕ್ಕೆ ತಂದಿರತಕ್ಕಂಥ ನಿರ್ಣಯವನ್ನು ಬೆಂಬಲಿಸಿ ಮೃತರಾಗಿರತಕ್ಕಂಥ ಬೇಅಂತ್ ಸಿಂಗ್ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಜಿ.ವಿ.ಶ್ರೀರಾಂರೆಡ್ಡಿ:-(ಬಾಗೇಪಲ್ಲಿ) ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಪಂಜಾಬಿನ ಮುಖ್ಯಮಂತ್ರಿಗಳಾದ ಬೇಅಂತ್ ಸಿಂಗ್ ಅವರ ಹತ್ಯೆ ಮಾಡಿರತಕ್ಕಂಥಾದ್ದು ನಿಜವಾಗಿಯೂ ಕೂಡ ಇಡೀ ದೇಶಕ್ಕೆ ಆಘಾತದ ವಿಷಯವಾಗಿದೆ. ಹಾಗೆಯೇ ಅವರ ಜೊತೆಯಲ್ಲಿ 12 ಜನ ಕೂಡ ಸಾವಿಗೀಡಾಗಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಪಂಜಾಬಿನಲ್ಲಿ ಶಾಂತಿನೆಲೆಸಿದೆ, ಅಲ್ಲಿ ಯಾವುದೇ ರೀತಿಯಾದಂತಹ ಭಯೋತ್ಪಾದಕ ಚಟುವಟಿಕೆ ಇಲ್ಲ ಎಂದು ಹೇಳಿ ಇಡೀ ದೇಶದ ಜನ ನಂಬಿದ್ದರು. ಆದರೆ ಈ ನಿಟ್ಟಿನಲ್ಲಿ ಬಹಳ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಿ ಬೇಅಂತ್ ಸಿಂಗ್‌ರವರು ಶಾಂತಿಯನ್ನು ನೆಲೆಸುವುದಕ್ಕೆ ಮೂಲಭೂತವಾಗಿ ಕಾರಣವಾಗಿದ್ದರು. ಆದರೆ ನಾವು ಮೊದಲಿನಿಂದಲೂ ಒಂದು ಎಚ್ಚರಿಕೆಯನ್ನು ಕೊಡುತ್ತಿದ್ದೆವು. ನೀವು ಆಡಳಿತಾತ್ಮಕವಾಗಿ ಭಯೋತ್ಪಾದನೆಯನ್ನು ನಿಗ್ರಹಿಸಲಿಕ್ಕೆ ಸಾಧ್ಯವಾಗಿದೆ. ಆದರೆ ಈ ಭಯೋತ್ಪಾದನೆಯ ಹಿಂದೆ ಇರತಕ್ಕಂಥ ಅವರ ತಾತ್ವಿಕ ನೆಲೆಗಟ್ಟಿನ ವಿರುದ್ಧ ಹೋರಾಟವನ್ನು ನಡೆಸದೇ ಹೋದರೆ ಆ ಭಯೋತ್ಪಾದನೆಯನ್ನು ಮೂಲತಃ ಉಚ್ಚಾಟನೆ ಮಾಡುವುದಕ್ಕೆ ಸಾಧ್ಯವಿಲ್ಲ. ಆ ಕೆಲಸವನ್ನು ಮಾಡಬೇಕು ಎಂದು ನಾವು ಅವರಲ್ಲಿ ಅನೇಕ ಸಂದರ್ಭದಲ್ಲಿ ಮನವಿ ಮಾಡಿದ್ದೆವು. ಆದರೆ ಇವತ್ತು

ಸ್ಪಷ್ಟವಾಗುತ್ತದೆ. ಆಡಳಿತಾತ್ಮಕ ದೃಷ್ಟಿಯಲ್ಲಿ ಅಲ್ಲಿ ಭಯೋತ್ಪಾದನೆ ನಿಗ್ರಹಿಸಲಿಕ್ಕೆ ಸಾಧ್ಯವಾಗಿತ್ತು. ಆದರೆ ಆ ಭಯೋತ್ಪಾದನೆಯ ಮೂಲಕಾರಣ ಆಗಿರತಕ್ಕಂಥ ಆ ತಾತ್ವಿಕ ನೆಲೆಗಟ್ಟಿನ ವಿರುದ್ಧ ಹೋರಾಟ ಮಾಡದೇ ಇದ್ದ ಕಾರಣಕ್ಕೋಸ್ಕರ ಆ ಭಯೋತ್ಪಾದಕ ಶಕ್ತಿಗಳು ಇವತ್ತಿಗೂ ಅಲ್ಲಿ ಜೀವಂತವಾಗಿದೆ ಎನ್ನುವುದು ಸ್ಪಷ್ಟವಾಗಿದೆ. ಆದುದರಿಂದ ನಾವು ಇಡೀ ದೇಶದ ಜನತೆ ಇದನ್ನು ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ದೇಶದ ಯಾವುದೇ ಭಾಗದಲ್ಲಿ ಈ ಭಯೋತ್ಪಾದನೆಯನ್ನು ನಾವು ಏನಾದರೂ ಮೂಲೋತ್ಪಾಟನೆ ಮಾಡಬೇಕಾದರೆ ಆ ಭಯೋತ್ಪಾದನೆಯನ್ನು ಕೇವಲ ಆಡಳಿತಾತ್ಮಕ ನಿಯಂತ್ರಣದಿಂದ ನಿಗ್ರಹಿಸಲಿಕ್ಕೆ ಸಾಧ್ಯವಿಲ್ಲ. ನಾವು ನಮ್ಮ ದೇಶದ ಜನರೆಲ್ಲರೂ ಒಗ್ಗಟ್ಟಿನಿಂದ, ಐಕ್ಯತೆಯಿಂದ ಆ ಭಯೋತ್ಪಾದನೆಯ ತಾತ್ವಿಕ ನೆಲೆಗಳ ವಿರುದ್ಧ ಹೋರಾಟ ನಡೆಸದೆ ಹೋದರೆ ಈ ದೇಶದಿಂದ ಮತ್ತು ಈ ಜಗತ್ತಿನಿಂದ ಭಯೋತ್ಪಾದನೆಯನ್ನು ನಾವು ಸಂಪೂರ್ಣವಾಗಿ ನಾಶ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಆ ದೃಷ್ಟಿಯಲ್ಲಿ ನಾವೆಲ್ಲರೂ ಕೂಡ ಗಂಭೀರವಾಗಿ ಚಿಂತಿಸಬೇಕಾಗಿದೆ. ಈ ಭಯೋತ್ಪಾದಕ ಹಾವಳಿಯಿಂದ ನಮ್ಮ ದೇಶದಲ್ಲಿ ಯಾವ್ಯಾವ ರೀತಿಯಲ್ಲಿ ಧಕ್ಕೆಯಾಗಿದೆ, ನಷ್ಟವಾಗಿದೆ ತೊಂದರೆಯಾಗಿದೆ ಎಷ್ಟು ತ್ಯಾಗಗಳನ್ನು ಮಾಡಬೇಕಾಗಿ ಬಂದಿದೆ ಎಂದು ಗೊತ್ತಿತ್ತು. ಪಂಜಾಬಿನಲ್ಲಿ ಶಾಂತಿ ನೆಲೆಸಲಿಕ್ಕೆ ಮೂಲ ಕಾರಣ ಆಗಿದ್ದಂತಹ ಬೇಅಂತ್ ಸಿಂಗ್ ಅವರು ನಿಜವಾಗಿಯೂ ಕೂಡ ಪ್ರಮಾಣಿಕವಾದ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ. ಅವರ ಹತ್ಯೆ ನಿಜವಾಗಿ ಕೂಡ ಭಾರೀ ಆಘಾತವಾಗಿದೆ. ಇಡೀ ದೇಶದ ಜನತೆ ಆಘಾತದಿಂದ ನೋಡತಕ್ಕಂಥ ಸ್ಥಿತಿ ಬಂದಿದೆ. ಪಂಜಾಬಿನಲ್ಲಿ ಭಯೋತ್ಪಾದನೆಯ ವಿರುದ್ಧ ಹೋರಾಟ ಮಾಡುವುದರಲ್ಲಿ ಯಶಸ್ವಿಯಾಗಿದ್ದಂತಹ ಬೇಅಂತ್ ಸಿಂಗ್ ಅವರಿಗೆ ಇಡೀ ದೇಶದ ಜನತೆ ನಮ್ರತೆಯಿಂದ ಅವರಿಗೆ ಶ್ರದ್ಧಾಂಜಲಿ ಹೇಳಬೇಕಾಗುತ್ತದೆ ಹಾಗೂ ಅವರ ಕುಟುಂಬ ವರ್ಗದವರಿಗೆ ಹಾಗೂ ಪಂಜಾಬ್ ಜನತೆಗೆ ಇವತ್ತು ನಾವೆಲ್ಲರೂ ಧೈರ್ಯ ಹೇಳಬೇಕಾಗಿದೆ. ಆ ಭಯೋತ್ಪಾದನೆ ವಿರುದ್ಧ ಹೋರಾಟ ಮಾಡುವುದಕ್ಕೆ ನಾವೆಲ್ಲರೂ ಕೂಡ ನಿಮ್ಮ ಜೊತೆಗಿದ್ದೇವೆ ಎಂದು ತಿಳಿಸಬೇಕಾಗಿದೆ. ಪಂಜಾಬಿನ ಪರಂಪರೆ ನಮಗೆ ಗೊತ್ತು. ತ್ಯಾಗ ಪ್ರತೀಕಗಳಿಗೆ ಅವರು ಇಡೀ ದೇಶಕ್ಕೆ ಮಾರ್ಗದರ್ಶನ ನೀಡತಕ್ಕಂಥ ಜನ. ನಾವೆಲ್ಲರೂ ಅವರಿಗೆ ಧೈರ್ಯ ಹೇಳಬೇಕಾಗಿದೆ. ಇಂತಹ ಒಂದು ಸಂದರ್ಭದಲ್ಲಿ ಪಂಜಾಬಿನಲ್ಲಿ ಆ ಭಯೋತ್ಪಾದಕರ ವಿರುದ್ಧ, ಆ ಭಯೋತ್ಪಾದಕರ ಶಕ್ತಿಗಳ ವಿರುದ್ಧ ಹೋರಾಟ ಮಾಡುವುದಕ್ಕೆ ನಾವೆಲ್ಲರೂ ನಿಮ್ಮ ಜೊತೆ ಇದ್ದೇವೆ ಎಂದು ಅವರಿಗೆ ಸಾಂತ್ವನ ಹೇಳಬೇಕಾಗಿದೆ, ಧೈರ್ಯಹೇಳಬೇಕಾಗಿದೆ. ಅದು ನಮ್ಮ ಕರ್ತವ್ಯ ಎಂದು ಹೇಳುತ್ತಾ, ಬೇಅಂತ್ ಸಿಂಗ್ ಅವರ ನಿಧನಕ್ಕೆ ಸಂತಾಪವನ್ನು ಸೂಚಿಸಿ ಮಾನ್ಯಮುಖ್ಯಮಂತ್ರಿಗಳು ತಂದಿರತಕ್ಕಂಥ ನಿರ್ಣಯಕ್ಕೆ ಸಂಪೂರ್ಣವಾಗಿ ಬೆಂಬಲ ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಕೆ.ಎಸ್.ಪುಟ್ಟಣ್ಣಯ್ಯ(ಪಾಂಡವಪುರ):-ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ತಂದಿರತಕ್ಕಂಥ ನಿರ್ಣಯವನ್ನು ಬೆಂಬಲಿಸುತ್ತಾ, ಮಾನ್ಯ ಬೇಅಂತ್ ಸಿಂಗ್ ರವರ ಹತ್ಯೆಯನ್ನು ಖಂಡಿಸುತ್ತಾ, ಶ್ರೀ ಬೇಅಂತ್ ಸಿಂಗ್ ಅವರನ್ನು ಭಯೋತ್ಪಾದಕರು ಇವತ್ತು ಹತ್ಯೆ ಮಾಡಿದರು. ಅವರೆಲ್ಲರೂ ಆ ಹತ್ಯೆಗೆ ಸಂತೋಷ ಪಡಬಹುದು. ಆದರೆ ಅವರು ಸತ್ಯವನ್ನು ಸಾಯಿಸುವುದಕ್ಕೆ ಸಾಧ್ಯವಿಲ್ಲ. ಹೋರಾಟವನ್ನು ಸಾಯಿಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಶಾಂತಿ ನೆಲೆಸಬೇಕಾದರೆ ನಿರಂತರ ಹೋರಾಟ ನಡೆಯುತ್ತಲೆ ಇರಬೇಕು. ಆದರೆ ಪಂಜಾಬಿನಲ್ಲಿ 3-4 ವರ್ಷಗಳಿಂದ ಶಾಂತಿ ಇತ್ತು. ಇನ್ನು ಭಯೋತ್ಪಾದಕರ, ಉಗ್ರಗಾಮಿಗಳ ಚಲನವಲನಗಳು ಹುಟ್ಟುವುದಕ್ಕೆ ಕಾರಣವೇನು?

ಇದನ್ನು ನಿರ್ನಾಮ ಮಾಡುವುದು ಯಾವ ರೀತಿ ಎನ್ನುವ ಬಗ್ಗೆ ಅತ್ಯಂತ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಇಲ್ಲಿ ಇರುವವರು ನಾವೆಲ್ಲರೂ ಹುಟ್ಟಿದ್ದೇವೆ, ಸಾಯುತ್ತೇವೆ, ಆದರೆ ಸಾಯುವುದರೊಳಗೆ ಏನಾದರೂ ಒಂದು ಸಾಧನೆ ಮಾಡಿ ಸಾಯುವುದು ಒಳ್ಳೆಯದು, ಭಯೋತ್ಪಾದಕರು ಇವತ್ತು ಏನು ಈ ಒಂದು ಈ ಕಾರ್ಯಕ್ರಮವನ್ನು ಮಾಡಿದ್ದಾರೆ, ಅವರ ದೇಹವನ್ನು ಛಿದ್ರ ಮಾಡಿರಬಹುದು, ಅವರ ದೇಹವನ್ನು ಮತ್ತೆ ಸೇರಿಸುವುದಕ್ಕೆ ಆಗದೇ ಇರಬಹುದು. ಆದರೆ ಉದ್ದೇಶವನ್ನು ಛಿದ್ರ ಮಾಡುವುದಕ್ಕೆ ಸಾಧ್ಯವಿಲ್ಲ ಆದುದರಿಂದ ಶ್ರೀ ಬೇಅಂತ್ ಸಿಂಗ್‌ರವರ ಹತ್ಯೆಯಿಂದ ಈ ದೇಶಕ್ಕೆ ಅತ್ಯಂತ ನಷ್ಟವಾಗಿದೆ. ಪಂಜಾಬಿನ ಜನತೆ ಶಾಂತಿಯನ್ನು ಕಾಪಾಡಲಿ ಎಂದು ಆಶಿಸುತ್ತಾ ಮಾನ್ಯ ಮುಖ್ಯಮಂತ್ರಿಯವರು ತಂದಿರತಕ್ಕಂಥ ನಿರ್ಣಯವನ್ನು ಬೆಂಬಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ.ಮುನಿಯಪ್ಪ (ಗಾಂಧಿನಗರ):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ತಂದಿರತಕ್ಕಂಥ ಸಂತಾಪ ತೀರ್ಮಾನ ಏನಿದೆ, ಆ ತೀರ್ಮಾನವನ್ನು ಬೆಂಬಲಿಸಿ, ಪಂಜಾಬ್ ರಾಜ್ಯದ ಮುಖ್ಯಮಂತ್ರಿಗಳಾಗಿದ್ದು, ಈ ಭಾರತ ದೇಶಕ್ಕೆ ಉಗ್ರಗಾಮಿಗಳ ನೆಲೆಯಾಗಿರುವಂತಹ ಪಂಜಾಬ್ ರಾಜ್ಯದಲ್ಲಿ ಶಾಂತಿ ನೆಲೆಸುವಂತಹ ರೀತಿಯಲ್ಲಿ ಅವರ ಆಡಳಿತದಲ್ಲಿ ಜನರು ಈ ದೇಶದ ಉದ್ದಗಲಕ್ಕೂ ನೆಮ್ಮದಿಯ ನಿಟ್ಟುಸಿರು ಬಿಡುವಂತಹ ವಾತಾವರಣವನ್ನು ಅವರು ಅಧಿಕಾರವನ್ನು ಸ್ವೀಕರಿಸಿದ ನಂತರ ಜಾರಿಗೆ ತಂದರು. ನಿನ್ನೆ ನಡೆದಂತಹ ಘಟನೆ ಪ್ರಪಂಚದ ನಾಗರೀಕ ಸಮಾಜ ತಲೆ ತಗ್ಗಿಸುವುದು ಮಾತ್ರವಲ್ಲ, ಮುಂದಿನ ದಿನಗಳಲ್ಲಿ ಬರುವಂತಹ ಗಂಡಾಂತರಗಳನ್ನು ಸೂಚಿಸುವಂತಹ ರೀತಿಯಲ್ಲಿ ಘಟನೆ ಇದೆ. ಈ ದೇಶದ ಮಹಾ ನಾಯಕರಾದಂತಹ ಶ್ರೀಮತಿ ಇಂದಿರಾಗಾಂಧಿಯವರು, ಶ್ರೀ ರಾಜೀವ್‌ಗಾಂಧಿ, ಶ್ರೀ ಬೇಅಂತ್‌ಸಿಂಗ್ ಅವರಂತಹ ಮಹಾ ನಾಯಕರುಗಳು ಅವರ ಜೀವನವನ್ನು ಮುಡುಪಾಗಿರಿಸಿ, ಅಧಿಕಾರವನ್ನು ನಡೆಸಿ ಪ್ರಾಣವನ್ನು ತೆತ್ತಂಥ ಈ ದಿವಸಗಳು ಏನಿವೆ, ಇವತ್ತು ಈ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವಂತಹ ನಾವೆಲ್ಲರೂ ಪಂಜಾಬ್ ಜನತೆಯ ಕೊಡುಗೆ ಏನಿದೆ. ಈ ದೇಶದ ಸ್ವಾತಂತ್ರ್ಯ ಸಂಗ್ರಾಮ ಇರಬಹುದು ಅಥವಾ ಮಿಲಿಟರಿ ಇರಬಹುದು ಹಾಗೂ ದೇಶದ ಪೋಲೀಸ್ ಇಲಾಖೆ ಇರಬಹುದು ಅವರ ಕೊಡುಗೆ ಬಹಳ ಮಹತ್ವವಾದದ್ದು ತ್ಯಾಗ, ಬಲಿದಾನಗಳನ್ನು ತಮ್ಮ ಜೀವನದ ರಕ್ತದ ನರನಾಡಿಗಳಲ್ಲಿ ತುಂಬಿಸಿಕೊಂಡಿರುವಂತಹ ಮಹಾನ್ ಜನತೆ ಇವತ್ತು ದುಃಖ ಸಾಗರದಲ್ಲಿ ಇರುವಂತಹ ಆ ರಾಜ್ಯದ ಜನರು ಮತ್ತು ಆ ಮುಖ್ಯಮಂತ್ರಿಗಳನ್ನು ಕಳೆದುಕೊಂಡಂತಹ ಕಾಂಗ್ರೆಸ್ ಪಕ್ಷಕ್ಕೆ ಇವತ್ತು ನಾವೆಲ್ಲರೂ ಅವರಿಗೆ ಸ್ಫೂರ್ತಿ ನೀಡಿ ಧೈರ್ಯವನ್ನು ನೀಡಿ, ಈ ದೇಶದ ಉದ್ದಗಲಕ್ಕೂ ಭಾರತದೇಶದಲ್ಲಿ ಉಗ್ರಗಾಮಿಗಳಿಗೆ ನೆಲೆ ಇಲ್ಲವೆನ್ನುವುದನ್ನು ನಿರೂಪಿಸುವ ರೀತಿಯಲ್ಲಿ ಇವತ್ತು ಪ್ರಜಾಪ್ರಭುತ್ವ ಶಕ್ತಿಗಳು ಹೆಚ್ಚು ಹೆಚ್ಚು ಧೈರ್ಯವನ್ನು ತೆಗೆದುಕೊಂಡು ಇಂತಹ ದುರ್ಘಟನೆ ನಡೆಯದ ರೀತಿಯಲ್ಲಿ ನಡೆದುಕೊಳ್ಳಬೇಕಾದಂತಹ ಪರಿಸ್ಥಿತಿ ಇವತ್ತು ಒದಗಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಏನು ಸಂತಾಪ ತೀರ್ಮಾನವನ್ನು ತಂದಿದ್ದಾರೆ, ಅದನ್ನು ಬೆಂಬಲಿಸಿ ಶ್ರೀ ಬೇಅಂತ್ ಸಿಂಗ್‌ರವರನ್ನು ಕಳೆದುಕೊಂಡಂತಹ ಕುಟುಂಬವರ್ಗದವರಿಗೂ ಮತ್ತು ಕಾಂಗ್ರೆಸ್ ಪಕ್ಷಕ್ಕೂ ಶಕ್ತಿಯನ್ನು ಪ್ರಕೃತಿ ನೀಡಲಿ ಎಂದು ಈ ಸಂತಾಪ ನಿರ್ಣಯವನ್ನು ಬೆಂಬಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು ಮಂಡಿಸಿರುವಂತಹ ನಿರ್ಣಯದ ಪರವಾಗಿ ಇಡಾಗಲೇ ಎಲ್ಲಾಪಕ್ಷಗಳ ನಾಯಕರು ಮಾತನಾಡಿದ್ದಾರೆ. ಇವತ್ತು ಪಂಜಾಬಿನ ಮುಖ್ಯಮಂತ್ರಿಗಳ ಕೊಲೆಯಾಗಿರುವ ರೀತಿಯನ್ನು

ನೋಡಿದರೆ ಇಡೀ ರಾಷ್ಟ್ರ ಇವತ್ತು ಬಹಳ ಧೀರ್ಘವಾಗಿ ಆಲೋಚನೆ ಮಾಡುವಂತಹ ಸ್ಥಿತಿಗೆ ಬಂದಿದ್ದೇವೆ. ದೇಶಕ್ಕೆ ಎಲ್ಲೋ ಒಂದು ಕಡೆ ಲಕ್ವ ಹೊಡೆದ ಹಾಗೆ ಕಾಣುತ್ತದೆ. ಲಕ್ವ ಹೊಡೆಯದೇ ಹೋದರೆ ಯಾವುದೇ ಒಂದು ಭಾಗದ ಮೇಲೆ ಸ್ವಲ್ಪ ಆಘಾತವಾದರೂ ಮನುಷ್ಯ ಎಚ್ಚರವಾಗುತ್ತಾನೆ. ಇಷ್ಟಾದರೂ ಕ್ರೌರ್ಯ, ಹಿಂಸೆ ಬಗ್ಗೆ ಸೂಕ್ಷ್ಮತೆಯನ್ನು ದಿನೇ ದಿನೇ ಕಳೆದುಕೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಜೀವನದ ಏನೋ ಒಂದು ಭಾಗವಾಗಿ ಕ್ರೌರ್ಯ ಮತ್ತು ಹಿಂಸೆ becomeing a part of life ಆಗಬಾರದು ಎಂಥ ಶ್ರೀಮಂತ ದೇಶಗಳಲ್ಲೂ ಎಷ್ಟೇ sensitive ಇರುವಂತಹ ದೇಶಗಳಲ್ಲೂ ದುರಂತವಾಗಬಹುದು. ಆದರೆ ಈ ರೀತಿ ಕ್ರೌರ್ಯ ಮತ್ತು ಹಿಂಸೆ ದಿನನಿತ್ಯದ ಜೀವನವಾಗುವುದು, ದಿನನಿತ್ಯದ ಸುದ್ದಿಯಾಗುವುದು, ಒಂದು ರಾಜ್ಯದ ಮುಖ್ಯಮಂತ್ರಿಗಳು, ಅದರಲ್ಲೂ ಪಂಜಾಬ್ ಬಹಳ ಶೂರ ನಾಡು, ಬೇರೆಯವರಿಗಿಂತ ಹೆಚ್ಚು ಕಡಿಮೆ ಎಂದು ಅಲ್ಲ ಹೇಳುವುದು. ಭಾರತದ ಯಾವುದೇ ಕಷ್ಟದ ಸಂದರ್ಭದಲ್ಲೂ ನಿಂತು ಹೋರಾಟ ಮಾಡಿದಂತಹ ಪಂಜಾಬಿನಂತಹ ನಾಡಿನಲ್ಲಿ ಒಬ್ಬ ಮುಖ್ಯಮಂತ್ರಿಗಳ ಕೊಲೆ ಈ ರೀತಿಯಾಗುವುದಕ್ಕೆ ಒಂದು ರೀತಿ ನಮ್ಮಲ್ಲಿ ಆಂತರಿಕ ದ್ರೋಹಿಗಳು ಇದ್ದಾರೆ. ಅವರು ಎರಡು ರೀತಿಯಲ್ಲಿರಬಹುದು. ನಿರುದ್ಯೋಗ ಮತ್ತು ನಿರಾಸೆಯಿಂದ ಕೂಡಿರುವಂತಹ ಯುವಕರೆ ಇರಬಹುದು. ಅವರು ಕಾಶ್ಮೀರದವರಿರಬಹುದು, ಪಂಜಾಬಿನಲ್ಲಿರಬಹುದು, ದಕ್ಷಿಣದಲ್ಲಿ ಅಲ್ಲಿ ಇಲ್ಲಿ ದರೋಡೆ ಕೊಲೆ ಮಾಡುತ್ತಿರುವಂತಹ ಹುಡುಗರು ಇರಬಹುದು. they may be misguided elements ಬಟ್ ಕೆಲವರು ದೇಶ ದ್ರೋಹಿಗಳೇ ಇದ್ದಾರೆ ಏನಾದರೂ ಮಾಡಿ ಅಭದ್ರತೆಯನ್ನು ತರಬೇಕು ಎಂದು ಅವರು ವಿದೇಶಿ ಶಕ್ತಿಗಳ ಕೈವಾಡ ಆಗಿ ಕೆಲಸ ಮಾಡುತ್ತಾರೆ. ಆದುದರಿಂದ ಇವತ್ತು ನಾವು ವಿದೇಶಿ ಕೈವಾಡಗಳ ಬಗ್ಗೆಯೂ ಹುಷಾರಾಗಿರಬೇಕು. ನಮ್ಮ ದೇಶದಲ್ಲಿರುವಂತಹ ದೇಶದ್ರೋಹಿಗಳ ಬಗ್ಗೆಯೂ ಹುಷಾರಾಗಿರಬೇಕು. ಮತ್ತೆ ಈ ರೀತಿ ನಿರಾಶೆ ಮತ್ತು ನಿರುದ್ಯೋಗದಿಂದ ಏನಾದರೂ ಮಾಡೋಣ, ಏನಾದರೂ ಸುಟ್ಟು ಹಾಕೋಣ, ಕೊಲೆ ಮಾಡೋಣ, ಎನ್ನುವಂತಹ ಈ ಯುವಕರಿಗೆ ಸದ್ಬುದ್ಧಿ ಕೊಡುವಂತಹ ಕೆಲಸವನ್ನು ಎಲ್ಲರೂ ಸೇರಿ ಮಾಡಬೇಕು. ಅದು ಕೇವಲ ಕೇಂದ್ರ ಸರ್ಕಾರ ಅಥವಾ ನಮ್ಮ ಸರ್ಕಾರ ಮಾತ್ರವಲ್ಲ ಎಲ್ಲರೂ ಸೇರಿ ಮಾಡಬೇಕು. ಮಹಾತ್ಮಗಾಂಧಿಯವರ ಈ ದೇಶ ಮತ್ತೊಮ್ಮೆ ಮಹಾತ್ಮಗಾಂಧಿಯವರನ್ನು ನೆನಪಿಗೆ ತರುವಂತಹ ಶಾಂತಿ ಸದ್ಬುದ್ಧಿ ಎಲ್ಲರಿಗೂ ಬರಲಿ ಎಂದು ಶ್ರೀಮಂತ ಬಂಗಾರಪ್ಪ ನಿಧನಕ್ಕೆ ಅತ್ಯಂತ ಹೃತ್ಪೂರ್ವಕವಾದ ಸಂತಾಪವನ್ನು ವ್ಯಕ್ತಪಡಿಸಿ ಮಾನ್ಯ ಸಭಾನಾಯಕರು ಸಂತಾಪಕ್ಕಂಥ ನಿರ್ಣಯವನ್ನು ಸಮರ್ಥನೆ ಮಾಡುತ್ತೇನೆ.

+ಶ್ರೀ ಎಂ.ವೀರಪ್ಪಮೊಯಿಲಿ (ಕಾರ್ಕಳ):- ಮಾನ್ಯ ಅಧ್ಯಕ್ಷರೆ, ನಿನ್ನೆ ಸಂಜೆ ಚಂಡೀಘಡದಲ್ಲಿ ಏನು ಒಂದು ದೊಡ್ಡ ದುರಂತ ಪ್ರಸಂಗ ನಡೆಯಿತು. ಆದುದರಿಂದ ಇಡೀ ರಾಷ್ಟ್ರ ದಿಗ್ಭ್ರಮೆಗೊಂಡಿತು. ಮಾನ್ಯ ಬೇಅಂತ್ ಸಿಂಗ್ ಅವರನ್ನು ನಾನು ಅತ್ಯಂತ ಸ್ನೇಹದಿಂದ ಅವರನ್ನು ಕಂಡಿದ್ದೇನೆ. ಅವರು ಮಿತ ಭಾಷಿಗಳು. ವಿಶೇಷವಾದಂತಹ ಗಾಂಭೀರ್ಯವನ್ನು ಪ್ರದರ್ಶನ ಮಾಡುವುದರ ಜೊತೆಯಲ್ಲಿ ಒಂದು ಉಕ್ಕಿನ ಸಂಕಲ್ಪವನ್ನು ಹೊಂದಿದ್ದಂತಹ ಶ್ರೇಷ್ಠ ರಾಷ್ಟ್ರಪ್ರೇಮಿ, ದಕ್ಷ ಆಡಳಿತಗಾರ ಮತ್ತು ಅವರು ಯಾವ ಒಂದು ಯುದ್ಧವನ್ನೇ ಪಂಜಾಬ್‌ನಲ್ಲಿರುವಂತಹ ಉಗ್ರಗಾಮಿಗಳ ವಿರುದ್ಧ ಮತ್ತು ಹೊರದೇಶಗಳ ಪ್ರಚೋದನೆಯಿಂದ ನಡೆಯುವಂತಹ ಯಾವತ್ತೂ ಆ ಉಗ್ರಗಾಮಿಗಳ ಚಟುವಟಿಕೆಗಳನ್ನು ತನ್ನ ಧೃಡಸಂಕಲ್ಪದಿಂದ. ಅತ್ಯಪ್ರಯಾಸದಿಂದ ಸಂಪೂರ್ಣವಾಗಿ ನಿಗ್ರಹಿಸಿದ್ದಾರೆಂದು ಹೇಳಿದರೂ ಅತಿಶಯೋಕ್ತಿಯಾಗಿರುವುದಿಲ್ಲ. ಅಂತಹ ಒಬ್ಬ ಶ್ರೇಷ್ಠ ರಾಷ್ಟ್ರ ಪ್ರೇಮಿ ರಾಷ್ಟ್ರದ ಗಡಿಯಲ್ಲಿರುವಂತಹ

ಒಂದು ರಾಜ್ಯ ಪಂಜಾಬ್‌ನಲ್ಲಿ ತಾನು ಸ್ಥೈರ್ಯದಿಂದ ಒಂದು ಸವಾಲನ್ನು ತನ್ನ ಜೀವನದಲ್ಲಿ ರಾಷ್ಟ್ರಕ್ಕೆ ಬಂದ ಸವಾಲನ್ನು ತನ್ನ ಜೀವನದಲ್ಲಿ ಅದನ್ನು ಅಳವಡಿಸಿಕೊಂಡು ಹೋರಾಟ ಮಾಡಿದರು ಅದು ಒಂದು ದಿವಸದ ಎರಡು ದಿವಸಗಳ ಹೊರಾಟವಲ್ಲ ಅಥವಾ ಮುಖ್ಯಮಂತ್ರಿಗಳಾಗಿ ಅಧಿಕಾರಕ್ಕೆ ಬಂದಮೇಲೆ ಅವರು ಪ್ರಾರಂಭಮಾಡಿದ ಹೋರಾಟವಲ್ಲ. ಅವರು ಉಗ್ರಗಾಮಿಗಳ ಚಟುವಟಿಕೆಗಳು ಅಥವಾ ಭಯೋತ್ಪಾದಕ ಶಕ್ತಿಗಳು ಪಂಜಾಬಿನಲ್ಲಿ ಹುಟ್ಟಿನಿಂದಲೇ ಅವರ ಮರಣದವರೆಗೂ ಸತತವಾಗಿ ನಿರಂತರವಾಗಿ ರಾತ್ರಿಹಗಲು ಅದರ ವಿರುದ್ಧ ಹೋರಾಟ ಮಾಡಿಕೊಂಡು ಬಂದಿದ್ದಾರೆ. ಅಲ್ಲಿ ಬರೀ ರಾಜಕೀಯ ಸ್ಥಿರತೆಯನ್ನು ಮಾತ್ರವಲ್ಲ ಅಥವಾ ಉಗ್ರಗಾಮಿಗಳನ್ನು ನಿಗ್ರಹಿಸುವುದು ಮಾತ್ರವಲ್ಲ, ಅವರು ಆರ್ಥಿಕವಾಗಿ, ಸಾಮಾಜಿಕವಾಗಿ ಕೂಡ ಇಡೀ ಪಂಜಾಬನ್ನು ಪುನರ್‌ನಿರ್ಮಾಣ ಮಾಡುವಂತಹ ಒಂದು ಶ್ರೇಷ್ಠ ಕೈಂಕರ್ಯವನ್ನು ಕೈಗೊಂಡಿರುವುದನ್ನು ನಾವು ಇವತ್ತು ನೆನಪು ಮಾಡಿಕೊಳ್ಳಬಹುದು. ಅವರು ಆಡಳಿತಾತ್ಮಕವಾಗಿ ಮಾತ್ರವಲ್ಲ, ಹಿಂದೆ ಹಾಗೂ ಇವತ್ತಿಗೂ ಕೂಡ ಈ ದೇಶಕ್ಕಾಗಿ ಆ ಪಂಜಾಬಿನ ಜನ ಏನುತ್ಯಾಗ ಮಾಡಿದ್ದಾರೆ, ಆ ತ್ಯಾಗ ಬರೀ ದೇಶದ ಅಥವಾ ಪಂಜಾಬಿನ ರಕ್ಷಣೆ ಮಾತ್ರವಲ್ಲ, ಇಡೀ ರಾಷ್ಟ್ರದ ಕೃಷಿ ಉತ್ಪಾದನೆಯನ್ನು ವಿರಿಸತಕ್ಕಂಥದ್ದು, ಆರ್ಥಿಕ ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಕೂಡ ಪಂಜಾಬಿನ ಪುನರುತ್ಥಾನ ಮಾಡತಕ್ಕಂಥ ಒಂದು ದೊಡ್ಡ ಕೆಲಸವನ್ನು ಕೈಗೊಂಡಂಥ ಬೇ ಅಂತ್ ಸಿಂಗ್ ರವರು ಇವತ್ತು ನಮ್ಮ ಮುಂದೆ ಇಲ್ಲ. ಅವರು ದೊಡ್ಡ ತ್ಯಾಗವನ್ನು ಮಾಡಿದ್ದಾರೆ. ಅವರು ಈ ರಾಷ್ಟ್ರಕ್ಕಾಗಿ ತ್ಯಾಗ ಮಾಡಿದ್ದಾರೆ. ಅವರು ಇವತ್ತು ಈ ದೊಡ್ಡ ತ್ಯಾಗವನ್ನು ಮಾಡಿ ತನ್ನ ದೇಶಕ್ಕಾಗಿ ತನ್ನ ಜನರಿಗಾಗಿ ತನ್ನ ಸಮರ್ಪಣೆ ಮಾಡಿ ಇವತ್ತು ಹುತಾತ್ಮರಾದಂಥ ಒಬ್ಬ ಶ್ರೇಷ್ಠ ರಾಷ್ಟ್ರ ನಾಯಕ, ರಾಷ್ಟ್ರಪ್ರೇಮಿ ಅವರ ಬಗ್ಗೆ ನಾವು ಎಷ್ಟು ಕೊಂಡಾಡಿದರೂ ಕೂಡ ಸಾಲದು. ಈಗಾಗಲೇ ನಮ್ಮ ಸಭಾನಾಯಕರು ಮತ್ತು ಅನೇಕ ಹಿರಿಯ ಸದಸ್ಯರು ಹೇಳಿದ ಪ್ರಕಾರ ಪುನ: ಉಗ್ರಗಾಮಿಗಳು ತಮ್ಮ ರಾಕ್ಷಸೀ ಕೃತ್ಯವನ್ನು ಇವತ್ತು ಏನು ಅಲ್ಲಿ ಪ್ರಾರಂಭ ಮಾಡಿದ್ದಾರೆ ಅದನ್ನು ಸದೆಬಡಿಯುವಲ್ಲಿ ನಮ್ಮ ರಾಷ್ಟ್ರದ ಜನರೆಲ್ಲ ಐಕ್ಯರಾಗಿ ಯಾವುದೇ ಒಂದು ತ್ಯಾಗಕ್ಕೆ ಸಿದ್ಧರಾಗಿ ನಾವು ಇವತ್ತು ಇದ್ದೇವೆ. ಮತ್ತು ಪಂಜಾಬಿನ ಜನ ನಮ್ಮ ಅನೇಕ ಸ್ನೇಹಿತರು ಹೇಳಿದ ಪ್ರಕಾರ ಭಯಭೀತರಾಗಬೇಕಾದಂಥ ಅವಶ್ಯಕತೆ ಇಲ್ಲ. ಅವರು ಏನು ಒಂದು ದೊಡ್ಡ ತ್ಯಾಗದ ದೊಡ್ಡ ಪರಂಪರೆಯನ್ನು ಬೇ ಅಂತ್‌ಸಿಂಗ್‌ರವರು ಬಿಟ್ಟು ಹೋಗಿದ್ದಾರೆ ಆ ತ್ಯಾಗದ ಶ್ರೇಷ್ಠ ಪರಂಪರೆಯನ್ನು ನಮ್ಮ ಇಡೀ ಜನ ಕೈಗೊಂಡು ಪಂಜಾಬಿನ ಜನತೆಯ ಜೊತೆಯಲ್ಲಿ ನಾವು ಯಾವಾಗಲೂ ಸಹಭಾಗಿಗಳಾಗಿ ಕೆಲಸಮಾಡುತ್ತೇವೆ, ಐಕ್ಯತೆಯಿಂದ ಈ ರಾಷ್ಟ್ರವನ್ನು ಉಳಸಲಿಕ್ಕೆ ಭಯೋತ್ಪಾದಕರನ್ನು ಸಂಪೂರ್ಣವಾಗಿ ಮೂಲೋತ್ಪಾಟನೆ ಮಾಡತಕ್ಕಂಥ ದೊಡ್ಡ ಕೆಲಸಕ್ಕೆ ನಮ್ಮನ್ನೆ ನಾವು ಸಮರ್ಪಣೆ ಮಾಡತಕ್ಕಂಥ ಒಂದು ದೊಡ್ಡ ಸಂಕಲ್ಪವನ್ನು ಇವತ್ತು ನಾವೆಲ್ಲರೂ ಮಾಡೋಣ ಅದ್ದರಿಂದ ಇಂತಹ ಒಂದು ನಿರ್ಣಯವನ್ನು ತಂದಂಥ ಸಭಾನಾಯಕರ ನಿರ್ಣಯಕ್ಕೆ ನಾವೆಲ್ಲ ಧ್ವನಿಗೂಡಿಸಿ ಮಾನ್ಯ ದಿವಂಗತ ಬೇಅಂತ್‌ಸಿಂಗ್ ರವರ ಏನು ಸಾವು ಇದೆ, ಒಂದು ದಾರುಣವಾದಂಥ ಅಂತ್ಯ ಇದೆ ಅದು ವಿಫಲವಾಗಲಿಕ್ಕೆ ಖಂಡಿತವಾಗಿಯೂ ಸಾಧ್ಯವಿಲ್ಲ. ಅವರು ಬಿಟ್ಟುಹೋದಂತ ಸ್ವಾತಂತ್ರದ ಜ್ಯೋತಿ, ಐಕ್ಯತೆಯ ಜ್ಯೋತಿಯನ್ನುಬೆಳಗಿಸಲಿಕ್ಕೆ ನಾವೆಲ್ಲಾ ಒಮ್ಮನಸ್ಸಿನಿಂದ ಕೆಲಸ ಮಾಡೋಣ ಎಂದು ಹೇಳಿ ನನಗೆ ಅವಕಾಶವನ್ನು ಮಾಡಿಕೊಟ್ಟಂಥ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಡಾ॥ ಜೀವರಾಜ ಆಳ್ವ (ಚಿಕ್ಕಪೇಟೆ):- ಮಾನ್ಯ ಸಭಾಧ್ಯಕ್ಷರೆ, ರಾಷ್ಟ್ರದ ಅತ್ಯಂತ ಪ್ರಗತಿಪರ ರಾಜ್ಯ ಪಂಜಾಬಿನ ರಾಜಕೀಯ ವಿದ್ಯಮಾನಗಳು ಬಹಳ ನನ್ನಲ್ಲಿ ಕುತೂಹಲ ಮೂಡಿಸಿದಂತ ರಾಜ್ಯ

ಆದು. ಸುಮಾರು ಮೂರು ದಶಕಗಳ ಹಿಂದೆ ರಾಷ್ಟ್ರವೆ ಹೆಮ್ಮೆ ಪಡುವ ಪ್ರಗತಿಪರ ರಾಜ್ಯವನ್ನಾಗಿ ಪರಿವರ್ತನೆ ಮಾಡಿದಂಥ ಪ್ರತಾಪ್‌ಸಿಂಗ್ ಖೈರಾನ್‌ರವರನ್ನು ನನಗನ್ನಿಸುತ್ತದೆ ಅವರೆ ಪ್ರಥಮ ಅಧಿಕಾರವಲ್ಲಿ ಇರುವಂಥ ಮುಖ್ಯಮಂತ್ರಿಯ ಒಂದು ಕಗ್ಗೊಲೆ ಪಂಜಾಬಿನಲ್ಲಿ ಆಯಿತು. ಬ್ಲೂ ಸ್ಟಾರ್ ಆಪರೇಷನ್ ಬಗ್ಗೆ ರಾಜಕೀಯ. ಆದರಲ್ಲಿ ಒಳ್ಳೆಯದು ಆಯಿತು ಕೆಟ್ಟದ್ದು ಆಯಿತು, ಯಾವ ವಾತಾವರಣ ಬಂಟಾಯಿತು ಎಂದು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ನನ್ನ ಅನಿಸಿಕೆಗಳು, ಒಂದು ವಿದ್ಯಮಾನವನ್ನು even if it is out of context, would I like to share it with the Assembly' ರಾಷ್ಟ್ರದ ಪ್ರಧಾನಮಂತ್ರಿಯಾಗಿ ಚಂದ್ರಶೇಖರ್‌ರವರು ಇದ್ದಾಗ ರಾಷ್ಟ್ರದ ಗೃಹಮಂತ್ರಿಗಳಾದ ಸುಭೋಧ್ ಕಾಂತ ಸಹಾಯ್ ಅವರು ನನಗೆ ಹೇಳಿಕಳುಹಿಸಿದ್ದರು, ಅವರ ಸೂಚನೆ ಏನಾಗಿತ್ತು ಅಂದರೆ ನಾನು ಪಂಜಾಬಿನ ರಾಜ್ಯಪಾಲನಾಗಿ ಕಾರ್ಯನಿರ್ವಹಣೆ ಮಾಡಬೇಕು ಎಂದು ನಾನು ಸ್ವಲ್ಪ ತತ್ತರಿಸಿದೆ, ಚಂದ್ರಶೇಖರ್‌ರವರು, ನೀನು ಹೇಡಿ, ಒಂದು ತರಹ ಹೆದರಿಕೆಯಿಂದ ಹಿಂಜರಿಯುತಿದ್ದೀಯ ಅಂಥ ಹೇಳಿದರು ಇಲ್ಲ ಸಾರ್ ಹಿಂಜರಿಯುತ್ತಿಲ್ಲ, ಆದರೆ ನನಗೆ "if you want me out of electrol practices, if you insist that I should take over as Governor, I am not going to contest any further elections. I am too young and too immature. Probably it will be a herculean Task for me" ಅಂಥ ಹೇಳಿದೆ. ಇಲ್ಲ ಅರ್ಜುನ್‌ಸಿಂಗ್ ರವರು ಪುನಃ ರಾಜ್ಯಪಾಲರಾದ ಮೇಲೆ ವಿಧಾನಸಭೆ ಚುನಾವಣೆ ಮಾಡಿದ್ದಾರೆ, ಇಲ್ಲ ನನಗೆ ಆಗುವುದಿಲ್ಲವೆಂದು ಹೇಳಿದೆ. ಆ ಕಾರ್ಯ ಒಂದು ದೊಡ್ಡ ಜವಾಬ್ದಾರಿಯನ್ನು ಹೊರಿಸಿದಾಗ ಅದನ್ನು ನಾನು ತೆಗೆದುಕೊಳ್ಳಬೇಕಾಗಿತ್ತು ಎನ್ನುವ ಅನಿಸಿಕೆ ನನ್ನಲ್ಲಿ ಆಗಿತ್ತು ಅದೊಂದು ಕಡೆ ಆದರೆ ಈ ಒಂದು ಸಾಮಾನ್ಯ ವ್ಯಕ್ತಿ ಬೇಅಂತ್‌ಸಿಂಗ್‌ರವರು, a very ordinary mortal, who had an addiction for nationalism. and a compassion ಇರತಕ್ಕಂತಹ ವ್ಯಕ್ತಿ ಕಾಂಗ್ರೆಸ್‌ನವರು, ಕಾಂಗ್ರೆಸ್ ಕಾರ್ಯಕರ್ತರು ಪಂಜಾಬಿನಲ್ಲಿ ಸ್ವಾತಂತ್ರವಾಗಿ ಎಲ್ಲರೂ ಒಂದಾಗದೆ ಇರುವಂಥ ಪ್ರಸಂಗದಲ್ಲಿ ಸಂಸ್ಥೆಯನ್ನು, ಒಂದು ರಾಜಕೀಯತೆಯನ್ನು ಮನಸ್ಸಿನಲ್ಲೆ ಇಟ್ಟುಕೊಂಡು ಕಟ್ಟಿಕೊಂಡಂಥ ಒಂದು ಸಂಸ್ಥೆಯನ್ನು ಕಟ್ಟಿದರು. ಪ್ರಜಾಪ್ರಭುತ್ವದ ಚುನಾವಣೆ ಘೋಷಣೆ ಮಾಡಿದಾಗ, ಎಲ್ಲಾ ಪಕ್ಷಗಳು ಅದನ್ನು ಅಪೋಸ್ ಮಾಡುತ್ತೇವೆಂದು ಹೇಳಿದಾಗ ಯಾವಾಗ ಒಂದು ಸಂಘಕ್ಕೆ ಅಧ್ಯಕ್ಷರಾಗಿ, ಸಂಘಟನೆ ಪರವಾಗಿ ಕೆಲಸ ಮಾಡಿ ಚುನಾವಣೆಯ ಅಭ್ಯರ್ಥಿಗಳಾಗಿ ನಿಲ್ಲಿಸುವಾಗಲೆ ಅವರು ತಮ್ಮ he had volunteered himself to sacrifice his life. That was the beginning. The very first day elections were announced, he took the leadership of facing the elections. ನಂತರ ವಿದ್ಯಮಾನಗಳು, ರಾಷ್ಟ್ರೀಯತೆಗೆ, ರಾಷ್ಟ್ರೀಯ ಸಮಗ್ರತೆಗೆ, ರಾಷ್ಟ್ರೀಯ ಏಕತೆಗೆ ಅವರು ಹಾಕಿದಂಥ ಬುನಾದಿ ನಾವೆಲ್ಲ ಹೆಮ್ಮೆ ಪಡುವಂಥದ್ದು. ನನ್ನ ಭಾವನೆ ಇಷ್ಟೆ, ನಾವು ಪ್ರತಿಯೊಂದು ಸಭೆ ಸಮಾರಂಭಗಳಲ್ಲಿ ರಾಷ್ಟ್ರೀಯ ಸಮಗ್ರತೆಯ ಬಗ್ಗೆ, ರಾಷ್ಟ್ರೀಯ ಏಕತೆಯ ಬಗ್ಗೆ ಮಾತನಾಡುತ್ತಿದ್ದೆವು ಇವತ್ತು ಒಂದು ರಾಜ್ಯದ ಮುಖ್ಯಮಂತ್ರಿಯಾದವರು ರಾಷ್ಟ್ರ ನಾಯಕರು ಅಂಥ ಬೇಅಂತ್‌ಸಿಂಗ್‌ರವರನ್ನು ನಾನು ಹೊಗಳುತ್ತಿಲ್ಲ. ಒಬ್ಬ ಸಾಮಾನ್ಯವ್ಯಕ್ತಿ. if it is totally obsessive commitment to nationalism, what a contribution he gave to the country ಆ ಒಂದು ವಿವೇಚನೆ, ಈ ರಾಷ್ಟ್ರ ಒಂದು ಅವಿಭಾಜ್ಯವಾಗಿ

ಉಳಿಯಬಹುದು ಎನ್ನುವುದನ್ನು ತೋರಿಸಿಕೊಟ್ಟಂಥ ಒಬ್ಬ ಸಾಮಾನ್ಯ ವ್ಯಕ್ತಿ, ಈ ಮನುಷ್ಯನಿಗೆ ಕೊಡಬೇಕಾದಂಥ ಕೊಡುಗೆ ನಮ್ಮ ಸಂತಾಪಸಂದೇಶಗಳನ್ನು ನಾವು ಕಳುಹಿಸುತ್ತಿದ್ದೇವೆ ನಾನು ತಮ್ಮಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ, it is not the statue that I am asking for. The very concept-we talk of national intergration, national conscience, national discipline ಎಂದು ಹೇಳುತ್ತೇವೆ, ಏನು ಮಾಡುತ್ತೇವೆ ರಾಷ್ಟ್ರಗೀತೆ ಹಾಡಲಿಕ್ಕೆ ನಮ್ಮ ಮಕ್ಕಳಿಗೆ ಬರುವುದಿಲ್ಲ, ವಂದೇ ಮಾತರಂ ಹೇಳಲಿಕ್ಕೆ ಬರುವುದಿಲ್ಲ, ರಾಷ್ಟ್ರನಾಯಕರ ಬಗ್ಗೆ ಗೊತ್ತಿಲ್ಲ, ಮಹಾತ್ಮಗಾಂಧಿ ಬಗ್ಗೆ ಗೊತ್ತಿಲ್ಲ. National Integration committee ಅಂಥ ಪ್ರಧಾನಮಂತ್ರಿಗಳು ವರ್ಷಕ್ಕೊಮ್ಮೆ ಅನ್ಯುಯಲ್ ರಿಚುಯಲ್ ನಮಗೆ ಯಾವುದು ಪಂಜಾಬ್, ಯಾವುದು ಹರಿಯಾಣ ಎಂಬುದು ಗೊತ್ತಿಲ್ಲ, in a war front ಇದು ಟೆರಿರಿಸ್ಟ್, ಸೆಕ್ಯೂರಿಟಿ ಅದೊಂದು ಕಡೆ ನೀವು ಕೋಟಿಗಟ್ಟಲೆ ಖರ್ಚುಮಾಡುತ್ತೀರಿ, ಆದರೆ ಈ ವಿದ್ವಂಸಕಕಾರಿ ಕೃತ್ಯಗಳನ್ನು ತಡೆ ಹಿಡಿಯುವಂಥ that militancy, it should be with the entire populace. The commitment to nationalism ಅಂತಹ ಒಂದು ವ್ಯವಸ್ಥೆ, ಅತ್ಯಂತ ಬೃಹತ್ ಸಂಸ್ಥೆಯನ್ನು ಮಾಡಿದರು. ರಾಷ್ಟ್ರೀಯ ಏಕತೆಗೆ, ರಾಷ್ಟ್ರೀಯ ಸಮಗ್ರತೆಗೆ ಇಂಬು ಕೊಡುವಂಥ ಸಂಸ್ಥೆಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಡಿ, ಅಂಥ ಒಂದು ವ್ಯವಸ್ಥೆ ಮಾಡಬೇಕು ಎಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಂಡು, ಒಂದೇ ಒಂದು ಸಲಹೆ ಸೆಕ್ಯೂರಿಟಿ ಲ್ಯಾಪ್ಸಸ್ ಬಗ್ಗೆ ಇದೆ. though it is again out of context I am a little worried. ಯಾವುದೋ ಮುಖ್ಯಮಂತ್ರಿಗಳ ಪ್ರವಾಸಕ್ಕೆ ಎಂದು ಹೇಳಿ ಒಂದು ಪ್ಲೇನ್ ತೆಗೆದುಕೊಳುತ್ತಿದ್ದಾರಂತೆ, ಆ ಪ್ಲೇನ್ ಏನೋ ಹಳೆಯದನ್ನು ತೆಗೆದುಕೊಳ್ಳುತ್ತಿದ್ದಾರೆ, ಆ ಹಳೆಯ ಪ್ಲೇನು ಯು.ಬಿ.ಪ್ಲೇನು. ಅದು ಮದ್ರಾಸ್‌ನಲ್ಲಿ ಮೂರು ವರ್ಷದ ಹಿಂದೆಬೆಲಿಲ್ಯಾಂಡಿಂಗ್‌ಗಾಗಿ ಮೂರು ವರ್ಷ it was in dissue ಅದನ್ನು ರೀಪರ್ಮಿಷ್ ಮಾಡಿ ತೆಗೆದುಕೊಳ್ಳಬೇಕು ಎನ್ನುವ ಕಲ್ಪನೆ ಸರ್ಕಾರದಲ್ಲಿ ಇದೆಯಂತೆ, ಅದನ್ನು ಕೂಡಲೆ they must drop. They must buy a new aircraft It is necessary for mobility in this 20th century ಎಂದು ಹೇಳುತ್ತೇವೆ ಹಳೆಯ ಹೆಲಿಕ್ಯಾಪ್ಟರ್, ಅದರಲ್ಲಿ ಹೋಗಲಿಕ್ಕೆ ಭಯವಾಗುತ್ತದೆ ಸನ್ಮಾನ್ಯ ಅಧ್ಯಕ್ಷರೆ, ಆದ್ದರಿಂದ ಮುಖ್ಯಮಂತ್ರಿಗಳಾಗಲಿ ಇದೆಲ್ಲಾ austerity ಅಂಥ ಹೋಗಬೇಡಿ, ಒಳ್ಳೆಯ ಹೆಲಿಕ್ಯಾಪ್ಟರ್ ತೆಗೆದುಕೊಳ್ಳಿ, ಒಳ್ಳೆಯ ಕಾರುಗಳನ್ನು ತೆಗೆದುಕೊಳ್ಳಿ, ಒಳ್ಳೆಯ ಪ್ಲೇನು ತೆಗೆದುಕೊಳ್ಳಿ, ಸಮಯದ ಅಭಾವವಿದೆ ಅದನ್ನೂ ಕೂಡ ತಮ್ಮ ಮೂಲಕ ಅವರಿಗೆ ಹೇಳಿ ಮತ್ತೊಮ್ಮೆ ಅತ್ಯಂತ ನಾನು ಅಪರೂಪವಾಗಿ ಈ ತರಹದ ಬಾವನೆಗಳನ್ನು ತೋಡಿಕೊಂಡಿದ್ದೇನೆ. It should not be cursory. It must be massive institution. I would again reiterate ತಾವೂ ಕೂಡ ಇದರ ಬಗ್ಗೆ ಸ್ವಲ್ಪ ಗಮನ ಕೊಟ್ಟು ಆಲೋಚನೆ ಮಾಡಬೇಕು. ಅತ್ಯಂತ ಒಳ್ಳೆಯ ಸಂಸ್ಥೆಯನ್ನು ಒಬ್ಬ ನಮ್ಮ ದೇಶದ ಸಾಮಾನ್ಯ ಪ್ರಜೆ ಭೇ ಅಂತ್ ಸಿಂಗ್ ರವರ ನೆನಪಿನಲ್ಲೆ ಈ ಸಂಸ್ಥೆ ಆಗಲಿ, ಅದು ಭಾರತದ ಸಮಗ್ರತೆಗೆ, ಐಕ್ಯತೆಗೆ ಹೆಚ್ಚಿನ ಇಂಬು ಕೊಡಲಿ ಎಂದು ಹಾರೈಸಿ ಅವರ ಆತ್ಮಕ್ಕೆ ಶಾಂತಿಯನ್ನು ನಾನು ಕೋರುತ್ತೇನೆ.

SRI NARAYANARAO GOVIND RAO TARALE (BELGAUM):- Mr. Speaker, Sir. Yesterday there was a sad news and this bombblast at Chandigarh involving the Chief Minister of

Punjab Sri Beant Sing and others died of that particular bombblast. It is a very sad news to all of us. We want to pay our tribute and mourn. Myself and on behalf of MES Group. I want to pay our tributes and mourn.

+ಶ್ರೀ ವೈಜನಾಥ್ ಪಾಟೀಲ್(ನಗರಾಬಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಸಚಿವರು):- ಮಾನ್ಯ ಅಧ್ಯಕ್ಷರೇ, 1991 ರಲ್ಲಿ ಪಂಜಾಬ್ ವಿಧಾನಸಭೆಗೆ ಚುನಾವಣೆಗಳು ಏನು ಆದವು, ಆ ಚುನಾವಣೆ ಆದ ಸಂದರ್ಭ ನೋಡಿದ್ದರೆ ಬಹುಶಃ ಮಾನ್ಯ ಬೇಅಂತ್‌ಸಿಂಗ್‌ರವರು ಒಬ್ಬ ಯಶಸ್ವಿ ಮುಖ್ಯಮಂತ್ರಿಗಳಾಗುತ್ತಾರೋ, ಇಲ್ಲವೋ ಎಂಬ ಬಗ್ಗೆ ಸಂಶಯ ಇತ್ತು. ಏಕೆಂದರೆ ಬಹಳ ದಿವಸಗಳವರೆಗೆ ಪಂಜಾಬ್‌ನಲ್ಲಿ ಚುನಾವಣೆಗಳನ್ನು ಮುಂದೂಡಲಾಗಿತ್ತು. 1991 ರಲ್ಲಿ ಲೋಕಸಭಾ ಚುನಾವಣೆಯ ಜೊತೆಗೆ ಚುನಾವಣೆಗಳು ಆಗಬೇಕಾಗಿತ್ತು. ಆದರೆ ಆಗಲಿಲ್ಲ. ನಂತರ ನಡೆದ ಚುನಾವಣೆಯನ್ನು ಪಂಜಾಬಿನ ಪ್ರಮುಖ ರಾಜಕೀಯ ಪಕ್ಷಗಳು ಬಹಿಷ್ಕರಿಸಿದವು. ಬಹಳಷ್ಟು ಜನ ಮತದಾನಕ್ಕೆ ಹೋಗಲಿಲ್ಲ. ಬಹುಶಃ ಶೇಕಡ 25 ರಷ್ಟು ಮತದಾನ ಕೂಡ ಅಲ್ಲಿ ನಡೆಯಲಿಲ್ಲ ಇಂತಹ ಸಂದರ್ಭದಲ್ಲಿ ಚುನಾವಣೆಗಳಾದ ಮೇಲೆ ಬೇಅಂತ್ ಸಿಂಗ್‌ರವರು ಪಂಜಾಬಿನ ಮುಖ್ಯಮಂತ್ರಿಗಳಾದರು. ಆಗ ಬಹುಶಃ ಇಂತಹ ಮುಖ್ಯಮಂತ್ರಿಯಿಂದ ಪಂಜಾಬಿನ ಸಮಸ್ಯೆ ಬಗೆಹರಿಯುತ್ತದೋ ಇಲ್ಲವೋ ಎಂಬ ಬಗ್ಗೆ ಸಂಶಯ ಇತ್ತು. ಒಂದು ವಿಶ್ವಾಸವೂ ಕೂಡ ಇರಲಿಲ್ಲ. ಬಹಳಷ್ಟು ಪ್ರಭಾವಶಾಲಿ ಮುಖ್ಯಮಂತ್ರಿಗಳೂ ಕೂಡ ಅಂತಹ ಸಂದರ್ಭದಲ್ಲಿ ವಿಫಲರಾಗುತ್ತಾರೆ, ವಿಫಲರಾಗಿದ್ದಾರೆ. ಆದರೆ ಚುನಾವಣೆಗಳಾದ ನಂತರ, ಕಳೆದ 4-5 ವರ್ಷಗಳಲ್ಲಿ ಭಯೋತ್ಪಾದಕರ ಸಮಸ್ಯೆಯೂ ಸೇರಿದಂತೆ ಪಂಜಾಬಿನ ಬಹಳಷ್ಟು ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅವರು ಸಫಲರಾಗಿದ್ದಾರೆ. 4-5 ವರ್ಷಗಳ ಹಿಂದೆ ಪ್ರತಿದಿನ ಪಂಜಾಬಿನಲ್ಲಿ ನಡೆಯುತ್ತಿದ್ದ ವಿಧ್ವಂಸಕ ಕೃತ್ಯಗಳ ಬಗ್ಗೆ ಏನು ವರದಿ ಬರುತ್ತಿತ್ತು, ಅದೆಲ್ಲಾ ಇತ್ತೀಚೆಗೆ ದೂರವಾಗಿತ್ತು ಇದಕ್ಕೆ ಅನೇಕ ಕಾರಣಗಳು ಇರಬಹುದು. ಏಕೆಂದರೆ ಕೇಂದ್ರದಲ್ಲಿದ್ದ ನಾಯಕತ್ವ, ರಾಜ್ಯದ ನಾಯಕತ್ವಕ್ಕೆ ಸ್ವತಂತ್ರತೆ ಕೊಡಬೇಕು. ಮಾನ್ಯ ಜವಹರಲಾಲ್ ನೆಹರೂರವರು ಪ್ರಧಾನ ಮಂತ್ರಿಗಳಾಗಿದ್ದಾಗ ಕೂಡ ಪಂಜಾಬ್ ನಲ್ಲಿ ದಾರಾಸಿಂಗ್, ಶ್ರೀ ಫತೇಸಿಂಗ್ ಇಂಥವರನ್ನು ಮುಂದಿಟ್ಟುಕೊಂಡು ಪ್ರತ್ಯೇಕ ಸಿಖ್ಖಿಸ್ತಾನ ಬೇಕೆಂಬ ಬೇಡಿಕೆ ಇಟ್ಟುಕೊಂಡು ಆಂದೋಲನಗಳು ನಡೆಯುತ್ತಿದ್ದವು. ಆಗ ಶ್ರೀ ಪ್ರತಾಪ್‌ಸಿಂಗ್ ಖೈರೋರವರು ಮುಖ್ಯಮಂತ್ರಿಗಳಾಗಿದ್ದರು. ಅವರ ಮೇಲೆ ಕೂಡ ಅನೇಕ ಆರೋಪಗಳು ಇದ್ದರೂ ಕೂಡ, ಅಂದಿನ ಪ್ರಧಾನ ಮಂತ್ರಿಗಳಾದ ಜವಾಹರ್‌ಲಾಲ್ ನೆಹರೂರವರು ಪಂಜಾಬಿನ ಸಮಸ್ಯೆಯನ್ನು ಬಗೆಹರಿಸಲಿಕ್ಕೆ, ಅಲ್ಲಿನ ಸಮಸ್ಯೆಗಳನ್ನು ಎದುರಿಸಲಿಕ್ಕೆ ಶ್ರೀಮಾನ್ ಖೈರೋರಂತಹವರೇ ನಾಯಕರು ಬೇಕೆಂದು, ಯಾರಿಗೂ ಕಿವಿಗೊಡದೇ ಅವರಿಗೆ ಸ್ವಾತಂತ್ರ್ಯತೆ ಕೊಟ್ಟಿದ್ದರು. ಅದೇ ರೀತಿಯಾಗಿ ಶ್ರೀಮಾನ್ ಬೇಅಂತ್‌ಸಿಂಗ್‌ರವರಿಗೂ ಕೂಡ ಬಹಳಷ್ಟು ರೀತಿಯಿಂದ, ಸ್ವಾತಂತ್ರ ರೂಪದಲ್ಲಿ ಕೆಲಸ ಮಾಡಲು ಅವಕಾಶ ಸಿಕ್ಕಿತ್ತು. ಅದರಿಂದ ಅವರ ಸಮಸ್ಯೆಗಳು ಬಗೆಹರಿಯಿತು. ಭಯೋತ್ಪಾದಕರ ಸಮಸ್ಯೆ ಕಡಿಮೆ ಆಗಿತ್ತು. ಈಗ ಇಂತಹ ಒಬ್ಬ ಮುಖ್ಯಮಂತ್ರಿಗಳು.. ಏಕೆಂದರೆ ಪಂಜಾಬಿನ ಸಮಸ್ಯೆ ಬಗೆಹರಿಯುತ್ತದೆಯೋ ಅಥವಾ ಬೇರೆ ಪಂಜಾಬೇ ಆಗಿ ಬಿಡುತ್ತದೆಯೋ ಎಂಬ ಬಗ್ಗೆ ಜನರಲ್ಲಿ ಭಯ ಇತ್ತು. ಇಂತಹ ಒಬ್ಬ ಒಳ್ಳೆಯ ಮುಖ್ಯಮಂತ್ರಿಗಳು, ಧೈರ್ಯದ ಮುಖ್ಯಮಂತ್ರಿಗಳು, ಮುಖ್ಯಮಂತ್ರಿಗಳು ಆದ ಕೂಡಲೇ ಅವರು ಹೇಳಿದ್ದರು. ಬಹುಶಃ ನನ್ನ ಜೀವ ಭಯೋತಾದಕರ

ಕೈಯ್ಯಲ್ಲೇ ಹೋಗಬಹುದು, ಅದನ್ನು ನಾನು ಎದುರಿಸುತ್ತೇನೆ, ಭಯೋತ್ಪಾದಕರ ಸಮಸ್ಯೆಗಳು ಏನಿವೆ, ಅದನ್ನು ಹತ್ತಿಕ್ಕಿಸುತ್ತೇನೆ ಎಂದು ಅವರು ಹೇಳಿದ್ದರು. ಕೊನೆಗೆ ಅವರ ಸಾವು ಕೂಡ ಭಯೋತ್ಪಾದಕರಿಂದಲೇ ನಡೆದಿದೆ. ಭಯೋತ್ಪಾದಕರು ಮತ್ತೆ ತಲೆ ಎತ್ತಿ ನಿಂತು ಅವರ ಜೀವವನ್ನು ತೆಗೆದುಕೊಂಡಿದ್ದಾರೆ. ಇಂತಹವರ ಬಗ್ಗೆ ನಾವೆಲ್ಲಾ ಶೋಕ ಸಂದೇಶಗಳನ್ನು ಕಳುಹಿಸುವುದು ಅವಶ್ಯಕ. ಮಾನ್ಯ ಮುಖ್ಯಮಂತ್ರಿಗಳು ಸದನದ ಮುಂದೆ ಮಂಡಿಸಿರುವ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಭಾ ನಾಯಕರು ತಂದಿರತಕ್ಕ ಒಂದು ನಿರ್ಣಯಕ್ಕೆ ನಾನೂ ಕೂಡ ಸಹಮತವನ್ನು ವ್ಯಕ್ತಪಡಿಸುತ್ತೇನೆ. ವಿವಿಧ ಪಕ್ಷಗಳ ನಾಯಕರು ಈ ನಿರ್ಣಯದ ಬಗ್ಗೆ ಮಾತನಾಡಿದ್ದಾರೆ. ಒಂದು ಬಹಳ ಪ್ರಾಮುಖ್ಯವಾದ ವಿಚಾರವೇನೆಂದರೆ, ಸ್ವಾತಂತ್ರ್ಯ ಪೂರ್ವದಲ್ಲಿ ಈ ದೇಶದ ಸ್ವಾತಂತ್ರ್ಯಕ್ಕೋಸ್ಕರ ಬಲಿದಾನ ಮಾಡಿದಂತಹ ಅನೇಕ ನೂರಾರು, ಸಾವಿರಾರು, ಲಕ್ಷಾಂತರ ಜನರು ಇರಬಹುದು. ಆದರೆ ಸ್ವಾತಂತ್ರ್ಯಾನಂತರ ಈ ರಾಷ್ಟ್ರದ ಒಂದು ಐಕ್ಯತೆ ಮತ್ತು ಸಮಗ್ರತೆಗೋಸ್ಕರ , ಈ ದೇಶವನ್ನು ಭಾಷೆಯ ಹೆಸರಿನಲ್ಲಿ, ಜಾತಿಗಳ ಹೆಸರಿನಲ್ಲಿ ಒಡಕು ಮೂಡಿಸತಕ್ಕ ಒಂದು ಶಕ್ತಿಗಳು ಇನ್ನೂ ಅಡಕವಾಗಿವೆ ಹಾಗೂ ಅವು ದಿನೇ ದಿನೇ ಚುರುಕುಗೊಳ್ಳುತ್ತಿವೆ ಎಂದು ಹೇಳಿದರೆ ತಪ್ಪಾಗಲಾರದು. ಈಗಾಗಲೇ ನಾವು ಈ ರಾಷ್ಟ್ರದ ನಾಯಕಿಯಾಗಿರತಕ್ಕ ಶ್ರೀಮತಿ ಇಂದಿರಾಗಾಂಧಿಯವರನ್ನು ಕಳೆದುಕೊಂಡಿದ್ದೇವೆ. ಶ್ರೀ ರಾಜೀವ್ ಗಾಂಧಿಯವರನ್ನು ಕೂಡ ಕಳೆದುಕೊಂಡಿದ್ದೇವೆ. ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ, ಅದೇ ರೀತಿಯಾಗಿ ಇವತ್ತು ಶ್ರೀ ಬೇಅಂತ್‌ಸಿಂಗ್‌ರವರನ್ನು ನಾವು ಕಳೆದುಕೊಂಡಿದ್ದೇವೆ. ಇವತ್ತು ಒಂದು ಪ್ರಶ್ನೆಯನ್ನು, ನಮ್ಮ ಮನಸ್ಸಿಗೆ ನಾವೇ ಹಾಕಿಕೊಳ್ಳಬೇಕಾಗುತ್ತದೆ. ಸ್ವಾತಂತ್ರ ಬಂದು ಕೇವಲ 48 ವರ್ಷಗಳಲ್ಲಿ ನಾವು ಇನ್ನೂ ಎಷ್ಟು ಜನರನ್ನು ಬಲಿದಾನ ಮಾಡಬೇಕು? ಸ್ವಾತಂತ್ರ್ಯ ಪೂರ್ವದಲ್ಲಿ ಇವತ್ತು ಪಂಜಾಬಿನ ಒಂದು ಭಾಗದಲ್ಲಿ ಬರತಕ್ಕ ಜನ ದೇಶಕ್ಕೆ ಮಾಡಿದಂತಹ ಸೇವೆಯನ್ನು ನೋಡಿ, ಇವತ್ತು ಸ್ವಾತಂತ್ರ್ಯಾನಂತರ ನಡೆಯುತ್ತಿರತಕ್ಕ ವಿದ್ಯಮಾನಗಳನ್ನು ನೋಡಿದರೆ, ಬಹುಶಃ ಎಲ್ಲರೂ ಕೂಡ ಭಯ ಪಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ನಿನ್ನೆ ಸಾಯಂಕಲ ನಾವು ಎಂದಾಜು ಸಮಿತಿಯ ಸಭೆಯೊಂದರಲ್ಲಿ ಪ್ರವಾಸವೊಂದನ್ನು ಕೈಗೊಳ್ಳಬೇಕೆನ್ನುವ ವಿಚಾರ ಬಂದಾಗ, ನಾನು ಚಂಡೀಗಡಕ್ಕೆ ಪ್ರವಾಸ ಹೋಗುವುದು ಸೂಕ್ತ ಎಂಬ ಒಂದು ಸಲಹೆಯನ್ನು ಕೊಟ್ಟೆ. ಆಗ ಅನೇಕ ಅಧಿಕಾರಿಗಳು ಮತ್ತು ನನ್ನ ಕೆಲವು ಮಿತ್ರರು ಪಂಜಾಬಿಗೆ ಹೋಗುವುದು ಬೇಡ ಎಂದರು. ಆಗ ನಾನು ಅವರಿಗೆ ಶ್ರೀಮಾನ್ ಬೇಅಂತ್‌ಸಿಂಗ್‌ರವರು ಪಂಜಾಬಿನ ಮುಖ್ಯಮಂತ್ರಿಗಳಾದ ಆದ ಮೇಲೆ ಕಳೆದ ಮೂರು ವರ್ಷಗಳಿಂದ ಯಾವುದೇ ರೀತಿ ಭಯ ಪಡತಕ್ಕ ವಾತಾವರಣ ಪಂಜಾಬಿನಲ್ಲಿ ಇಲ್ಲ, ನಾವು ನಿರ್ಭೀತರಾಗಿ ಪ್ರವಾಸ ಹೋಗಬಹುದು ಎಂಬ ಮಾತನ್ನು ನಾನು ನಿನ್ನೆ ಬೆಳಿಗ್ಗೆ ಹೇಳಿದ್ದೆ. ಸಾಯಂಕಾಲ ಐದು ಗಂಟೆಗೆ ಇಂತಹ ಒಂದು ಬರ್ಬರ ಕೃತ್ಯ ಪಂಜಾಬ್‌ನಲ್ಲಿ ಆಯಿತು ಎಂದು ಹೇಳಿದರೆ, ಅದನ್ನು ಯಾವ ರೀತಿಯಿಂದ ನಂಬಬೇಕೋ ಗೊತ್ತಾಗುತ್ತಿಲ್ಲ. ಶಾಂತಿಯಿಂದ ನಾವು ಬದುಕಬೇಕು ಎಂಬ ಬಗ್ಗೆ ನಾವು ಇವತ್ತು ಚಿಂತೆ ಮಾಡಬೇಕಾಗುತ್ತದೆ. ಶ್ರೀಮಾನ್ ಬೇಅಂತ್ ಸಿಂಗ್‌ರವರು ದೇಶದ ಹುಟ್ಟು ಕಾಂಗ್ರೆಸಿಗರಾಗಿ, ಕಾಂಗ್ರೆಸ್ಸಿನ ಮೂಲ ಪ್ರಾಥಮಿಕ ಸದಸ್ಯತ್ವದಿಂದ ಹಿಡಿದು ಪಾರ್ಲಿಮೆಂಟ್ ಬೋರ್ಡ್ ಸದಸ್ಯರಾಗಿ ಕೂಡ ಸೇವೆಯನ್ನು ಮಾಡಿದ್ದಾರೆ. ಇಂತಹ ವ್ಯಕ್ತಿಯ ಸಾವಿನಿಂದ ನಮಗೆ ಅಗಾಧವಂತಹ ನೋವು ಉಂಟಾಗಿದೆ. ಇಂತಹ ಒಂದು ಕೃತ್ಯವನ್ನು ನಾವು ಖಂಡಿಸಬೇಕಾಗಿದೆ. ಮತ್ತೊಂದು ಪ್ರಾಮುಖ್ಯವಾದ

ವಿಚಾರ ಎಂದರೆ, 1992ನೇ ಇಸವಿಯಲ್ಲಿ ಪಂಜಾಬ್‌ನಲ್ಲಿ ಚುನಾವಣೆಗೆ ಯಾರೂ ನಿಲ್ಲದೇ ಇರತಕ್ಕ ಒಂದು ಪರಿಸ್ಥಿತಿ ಇರುವಾಗ, ಯಾರಿಗಾದರೂ ಕೂಡ ನೀವು ಪಂಜಾಬ್‌ನ ಮುಖ್ಯಮಂತ್ರಿಗಳಾಗುತ್ತೀರ, ನಿಮ್ಮನ್ನು ಮುಖ್ಯಮಂತ್ರಿಯಾಗಿ ನಾಮಿನೇಟ್ ಮಾಡುತ್ತೇವೆ ಎಂದು ಹೇಳಿದರೂ ಕೂಡ 'ಬೇಡ' ಎನ್ನತಕ್ಕ ಒಂದು ಪರಿಸ್ಥಿತಿ ಇದ್ದ ಸಂದರ್ಭದಲ್ಲಿ ಕೂಡ, ಅವತ್ತು ಆ ಚುನಾವಣೆಗಳನ್ನು ಎದುರಿಸಲು ತಮ್ಮ ಪಕ್ಷದಲ್ಲಿರತಕ್ಕ ಎಲ್ಲರನ್ನೂ ಹುರಿದುಂಬಿಸಿ, ಪ್ರಜಾಪ್ರಭುತ್ವದ ಒಂದು ಮೌಲ್ಯಕ್ಕೆ ಮತ್ತು ವಿಧಿವಿಧಾನಗಳ ರೀತಿಯಲ್ಲಿ ಚುನಾವಣೆಯನ್ನು ಎದುರಿಸತಕ್ಕ ಒಂದು ತೀರ್ಮಾನವನ್ನು ಶ್ರೀಮಾನ್ ಬೇಅಂತ್ ಸಿಂಗ್‌ರವರು ಮಾಡಿದರು. ಅವರು ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸುವ ಸಂದರ್ಭದಲ್ಲಿ ಬಹುಶಃ ಅವರಿಗೆ ಇಂತಹ ಒಂದು ಸಾವಿಗೆ ನಾನೂ ಯಾವತ್ತೂ ಕೂಡ ಈಡಾಗುತ್ತೇನೆ ಎಂಬ ಒಂದು ಕಲ್ಪನೆ ಬಂದಿದ್ದರೂ ಬಂದಿರಬಹುದು. ಅವರ ಸಾವಿಗೆ ಸಂತಾಪವನ್ನು ಸೂಚಿಸುವುದರ ಜೊತೆಗೆ, ಅವರ ಸಾವಿನ ಕೃತ್ಯವನ್ನು ಖಂಡಿಸುವಂತಹ ಕೆಲಸವನ್ನು ಕೂಡ ಇವತ್ತಿನ ದಿವಸ ನಾವೆಲ್ಲರೂ ಮಾಡಬೇಕಾಗಿದೆ ಎಂದು ಹೇಳುತ್ತಾ ನನಗೆ ಈ ನಾಲ್ಕು ಮಾತುಗಳನ್ನು ಆಡಲು ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಯಾವುದೇ ಒಂದು ಸಮಾಜದಲ್ಲಿನ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳಲ್ಲಿನ ಲೋಪ ದೋಷಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಕೆಲವು ಜನ ತಮ್ಮದೇ ಆದಂತಹ ಮಾರ್ಗಗಳನ್ನು ಆಯ್ದುಕೊಳ್ಳುತ್ತಾರೆ. ಈ ರೀತಿಯಾದಂತಹ ಒಂದು ಮಾರ್ಗವನ್ನು ಅವರು ಆಯ್ದುಕೊಳ್ಳುವಾಗ, ಅದು ಹಿಂಸಾತ್ಮಕ ರೂಪ ಪಡೆದು ಮಾನವೀಯ ಮೌಲ್ಯಗಳು ಮಾಯವಾದಾಗ, ಅದರ ಕೊನೆಯ ಪರಿಣಾಮ ಇಂತಹ ದುರ್ಘಟನೆಗಳು ಸಂಭವಿಸುವುದರಲ್ಲಿ ಪರ್ಯಾವಸಾನಗೊಳ್ಳುತ್ತದೆ. ಹುಟ್ಟು ಅಕಸ್ಮಿಕ, ಸಾವು ನಿಶ್ಚಿತ. ನಾವ್ಯ ಯಾವುದೇ ಒಂದು ಉದ್ದೇಶಕ್ಕಾಗಿ ಮುಡಿಪಾಗಿಟ್ಟಾಗ ಸಾವಿನ ಬೆಲೆ ಇಮ್ಮಡಿಯಾಗುತ್ತದೆ, ನೋವು ಕಡಿಮೆಯಾಗುತ್ತದೆ ಅಕಸ್ಮಿಕ ಸಾವುಗಳು ಹಲವಾರು ನಡೆಯುತ್ತದೆ. ಒಂದು ಘನ ಉದ್ದೇಶಕ್ಕಾಗಿ ಈ ರೀತಿಯ ಅಕಸ್ಮಿಕ ಸಾವು ಆದಾಗ, ಯಾವ ಉದ್ದೇಶಕ್ಕಾಗಿ ಕೆಲವರು ತಮ್ಮ ಜೀವವನ್ನು ಅರ್ಪಣೆ ಮಾಡಿರುತ್ತಾರೋ, ಅವರು ಹುತಾತ್ಮರ ಪಟ್ಟಿಯಲ್ಲಿ ಸೇರ್ಪಡೆಯಾಗುತ್ತಾರೆ ಮತ್ತು ನಮಗೆ ಒಂದು ಜವಾಬ್ದಾರಿಯನ್ನು ಬಿಟ್ಟು ಹೋಗುತ್ತಾರೆ. ಆ ಉದ್ದೇಶದ ಈಡೇರಿಕೆಗಾಗಿ ನಾವು ಕೂಡ ಅದಕ್ಕಿಂತ ಹೆಚ್ಚಿನದಾದ ತ್ಯಾಗಕ್ಕೆ ಸಿದ್ಧರಾಗಬೇಕು ಎನ್ನತಕ್ಕಂತಹ ಒಂದು ಸೂಚನೆಯನ್ನು ಬಿಟ್ಟು ಹೋಗುತ್ತಾರೆ. ಇಷ್ಟನ್ನು ಹೇಳಿ, ಮೃತರ ಗೌರವಾರ್ಥ ಈ ಸದನದ ಎಲ್ಲಾ ಸನ್ಮಾನ್ಯ ಸದಸ್ಯರು ಒಂದು ನಿಮಿಷ ಎದ್ದು ನಿಂತು ಗೌರವ ಸೂಚಿಸಬೇಕೆಂದು ವಿನಂತಿ ಮಾಡುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಶ್ರೀ ಹೆಚ್.ಡಿ.ದೇವೇಗೌಡ:- ನಾಳೆ ಅವರ ಪಾರ್ಥಿವ ಶರೀರಕ್ಕೆ ಅಂತಿಮ ಕ್ರಿಯೆ ನೆಡೆಯುವುದರಿಂದ ನಾಳೆ ಸರ್ಕಾರ ಒಂದು ದಿವಸ ರಜೆ ಘೋಷಿಸಲಿಕ್ಕೆ ನಿರ್ಣಯ ಮಾಡಿದ್ದೇವೆ. ಅದನ್ನು ಈ ಸದನದಲ್ಲಿ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ಅಧ್ಯಕ್ಷರು:- ಈಗ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಮೃತರ ಗೌರವಾರ್ಥ ನಮ್ಮ ಎಲ್ಲಾ ಕಾರ್ಯಕಲಾಪಗಳನ್ನು

ಇಲ್ಲಿಗೆ ನಿಲ್ಲಿಸಿ, ಸದನವನ್ನು ಮುಂದೂಡಿ, ಪುನಃ ಸೋಮವಾರ ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಬೆಳಿಗ್ಗೆ 11ಗಂಟೆ 42 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 4ನೇ ಸೆಪ್ಟೆಂಬರ್ ಮಾಹೆ 1995ರ ಸೋಮವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)